ಕೆಲವು ಸಣ್ಣ ಕಾವ್ಯಗಳು

ಸೇಡಿಯಾಪು ಕೃಷ್ಣಭಟ್ಟ

ಶ್ರೀ. ಅಕ್ಕರೆಯ
ವಿದ್ವಾನ್ ಶಂಕರನಾರಾಯಣ ನಾವಡರಿಗೆ

ಬೆಳಗಿನ ಕಾಣಿಕೆ

ನೀಲಾವರ ಸುರೇಂದ್ರ ಅಡಿಗ

೧.೭.೬೮

ಕೆಲವು ಸಣ್ಣ ಕಾವ್ಯಗಳು

ಸೇಡಿಯಾಪು ಕೃಷ್ಣಭಟ್ಟ

೧೯೪೯

ಬೆಲೆ: ಒಂದೂವರೆ ರೂಪಾಯಿ.

ಪರಿವಿಡಿ

— ಪುಸ್ತಕ ದೊರೆಯುವ ವಿಳಾಸ —

ಸೇಡಿಯಾಪು ಕೃಷ್ಣಭಟ್ಟ

ಸೈಂಟ್ ಎಲೋಶಿಯಸ್ ಕಾಲೇಜು

ಮಂಗಳೂರು.

ಅರಿಕೆ

ಈ ನಾಲ್ಕು ಸಣ್ಣ ಕಾವ್ಯಗಳು—ವಸ್ತು, ಪ್ರತಿಪಾದ್ಯ, ನಿರೂಪಣಕ್ರಮ, ಛಂದೋಬಂಧ—ಎಲ್ಲ ಬಗೆಯಲ್ಲಿಯೂ ಒಂದೊಂದು ಒಂದೊಂದಾಗಿವೆ. ಇವೆಲ್ಲವುಗಳಿಗೆ ಒಂದಾಗಿ ಒಪ್ಪುವ ಬೇರೆ ಯಾವ ಹೆಸರೂ ಮನದಟ್ಟದೆ, **ಕೆಲವು ಸಣ್ಣ ಕಾವ್ಯಗಳು** ಎಂದೇ ಈ ಪುಸ್ತಕಕ್ಕೆ ಹೆಸರಿಟ್ಟಿದ್ದೇನೆ.

ಇವುಗಳೊಳಗೆ **ಶ್ವಮೇಧ** ಮತ್ತು **ತರುಣಧನುನಿ** ಎಂಬವು ಬೇರೆ ಬೇರೆ ಪುಸ್ತಕರೂಪವಾಗಿ ೧೯೩೩ರಲ್ಲಿ ಅಚ್ಚಾಗಿದ್ದುವು. **ಕೃಷ್ಣಾ ಕುಮಾರಿ** 'ನಮ್ಮ ಕವಿತೆಗಳು' ಎಂಬ ಸಂಗ್ರಹದಲ್ಲಿಯೂ ಪಠ್ಯಪುಸ್ತಕಗಳಲ್ಲಿಯೂ ಈ ಮೊದಲು ಕಾಣಿಸಿಕೊಂಡಿದೆ. **ಪುಣ್ಯಲಹರಿ** ಮಾತ್ರ, ರಚಿತವಾಗಿ ಸುಮಾರು ಹತ್ತು ವರ್ಷಗಳು ತುಂಬಿದರೂ, ಗೆಳೆಯರನೇಕರು ಓದಿ ಕೇಳಿ ಒತ್ತಾಯಿಸುತ್ತಿದ್ದರೂ ಈ ವರೆಗೆ ಮುದ್ರಿತವಾಗಲಿಲ್ಲ. ಬರೆಯುವುದರಲ್ಲಿ ಹೇಗೋ ಹಾಗೆ ಪ್ರಕಾಶಪಡಿಸುವುದರಲ್ಲಿಯೂ ನಾನು ಮಂದಗಾಮಿ ಎಂದು ಹೇಳಬೇಕಾಗುತ್ತದೆ.

ಪುಣ್ಯಲಹರಿಯ ಛಂದಸ್ಸಿನ ಕುರಿತು ಒಂದೆರಡು ಮಾತು ಅವಶ್ಯ. 'ಪಿರಿಯಕ್ಕರ'ವೆಂಬುದು ಕನ್ನಡದಲ್ಲಿ ಅತಿ ಪುರಾತನವಾದೊಂದು ಹಾಡಿನ ಮಟ್ಟು. ಪಂಪನ ಪಿರಿಯಕ್ಕರಗಳೇ ನಮಗೆ ದೊರಕಿರುವ ಆ ಬಂಧಗಳಲ್ಲಿ ಹಳೆಯವೆಂದು ಹೇಳಬಹುದು. ಅದರ ಲಕ್ಷಣವು ನಾಗವರ್ಮನ ಛಂದೋಂಬುಧಿಯಲ್ಲಿ ಉಕ್ತವಾಗಿದೆ. ಪಿರಿಯಕ್ಕರಕ್ಕೆ ನಾಲ್ಕು ಪಾದಗಳು; (ಈ ಪುಸ್ತಕದಲ್ಲಿ ಎಂಟು ಸಾಲುಗಳಾಗಿ ಮುದ್ರಿಸಿದುದು ಸೌಕರ್ಯಕ್ಕಾಗಿ.) ಪ್ರತಿ ಪಾದದಲ್ಲಿಯೂ ಮೊದಲನೆಯದು ಬ್ರಹ್ಮಗಣ, ಮತ್ತೆ ಐದು ವಿಷ್ಣುಗಣ, ಕೊನೆಯದು ರುದ್ರಗಣ. ಇದನ್ನು 'ಅಟ ತಾಳ—ಚಾಪು' ಗತಿಯಲ್ಲಿ ಹಾಡಲಾಗುತ್ತದೆ. ಆದರೆ ಹಾಡುವಾಗ, ಮೊದಲನೆಯದಾದ ಬ್ರಹ್ಮಗಣವು ವಿಷ್ಣುಗಣದಷ್ಟೇ ಕಾಲವನ್ನು ಆಕ್ರಮಿಸುವಂತೆ, ಅದರ ಒಂದಂಶವನ್ನು—ಎಂದರೆ ಬ್ರಹ್ಮಗಣದ ಕೊನೆಯ ಅಕ್ಷರವನ್ನು ಅಥವಾ ಗಣದಾದಿಯಲ್ಲಿರಬಹುದಾದ ಗುರುವನ್ನು—ಅಧಿಕವಾಗಿ ಎಳೆಯಬೇಕು. ಈ ಎರಡರೊಳಗೆ ಯಾವುದು ಎಲ್ಲಿ ಯುಕ್ತವೆಂಬುದು ಅರ್ಥವ್ಯಕ್ತಿಯ ಕಡೆಗೆ ಲಕ್ಷ್ಯವಿಟ್ಟರೆ ಸಂದರ್ಭೋಚಿತವಾಗಿ ಸ್ಫುಟವಾಗುವುದು. ಮೊದಲನೆಯ ರೀತಿಗೆ ಉದಾ—:

೧. ವಿಂಧ್ಯಾ . . । ಟವಿಯಲ್ಲಿ । ಭಿಲ್ಲರೊ । ಡೆಯನಲ್ಲಿ ।
ಹದಿನಾರು । ತುಂಬಿದ । ಕನ್ನೆತುಂಬಿ ॥

೨ ತಿಳಿನೋ: . . । ದಯೆಯೊ ಪೊ । ದಳ್ದಂತೆ । ನೈರ್ಮಲ್ಯ ।
ಮಡಿಯುಟ್ಟು । ಬಂದಂತೆ । ಮುಂದಿರಲು ॥

ಎರಡನೆಯ ರೀತಿಗೆ—:

೧. ಭೀ . . ಮ । ಕಾಯದ । ಭಿಲ್ಲರು । ಮಧ್ಯದ ।
ಭಾಜನ । ಗಳನಪ್ಪಿ । ಮಲಗಿದರು ॥

೨. ಮೆಲ್ . . ಲ । ನೊಂದು ಬೆ । ರಳಲಿ ಸಿ । ಡಿಯೆ ರಕ್ತ ।
ಚಿಮ್ಮಬ । ಹುದೊ ಎಂಬ । ಪರಿಪೂರ್ಣಾಂಗಿ ॥

ಪ್ರತಿಯೊಂದು ಪಾದವನ್ನು ತಾಳಕ್ಕೆ ಸರಿಯಾಗಿ ವಿಭಾಗಿಸಿದರೆ ಮೊದಲಿನ ಆರು ಗಣಗಳು (ಬ್ರಹ್ಮ ೧ + ವಿಷ್ಣು ೫) ತಾವಾಗಿ ಒಂದೊಂದು ತಾಲಖಂಡ ವಾಗುತ್ತವೆ; ಕೊನೆಯದೊಂದು ರುದ್ರಗಣದಲ್ಲಿ ಎರಡು ಖಂಡಗಳು. ಉದಾ—:

——। ಕನ್ನೆತುಂ। ಬಿ . . . . ॥
——। ಮುಂದಿರ। ಲು . . . . ॥
——। ಮಲಗಿದ। ರು . . . . ॥
——। ಪರಿಪೂರ್ಣಾ೦। ಗಿ . . . . ॥

ಹೀಗೆ ಪ್ರತಿಯೊಂದು ಪಾದದಲ್ಲಿ ಎಂಟು ತಾಲಖಂಡಗಳು.

ಪಿರಿಯಕ್ಕರವೇ ಅಲ್ಲದಿದ್ದರೂ ಈ ಧಾಟಿಯಲ್ಲಿ ಬರೆದ ಹಳೆ-ಹೊಸ ಹಾಡುಗಳು ಕನ್ನಡದಲ್ಲಿ ಹೇರಳವಾಗಿವೆ. ಉದಾ—:

ರಂ . . ಗ। ನಾಯಕ। ರಾಜೀವ। ಲೋಚನ।
ರಮಣ ನೀ। ಬೆಳಗಾಯಿ। ತೇಳೆನು। ತ . . . . ॥
ಅಂಗನೆ। ಲಕ್ಷ್ಮಿ ತಾ। ಪತಿಯನೆ। ಬ್ಬಿಸುವಳು।
ಶೃಂಗಾ . .। ರದ ನಿದ್ರೆ। ಸಾಕು ಸಾ। ಕೆನುತಲಿ ॥
(ದಾಸರ ಪದ)

ಶ್ರೀ. ಬೇಂದ್ರೆಯವರ 'ಕುಣಿಯೋಣು ಬಾರಾ' ಎಂಬ ಹಾಡು ಕೂಡ ಇದೇ ತಾಳಗತಿಯಲ್ಲಿದೆ. ಉದಾ—:

ತಾಳ್ಯಾಕ। ತಂತ್ಯಾಕ। ರಾಗದ। ಚಿಂತ್ಯಾಕ।
ಹೆಜ್ಜ್ಯಾಕ। ಗೆಜ್ಜ್ಯಾಕ। ಕುಣಿಯೋಣು। ಬಾ . . . . ॥

ಈ ವಿವರಣದಿಂದ ಓದಿಗೆ ನೆರವು ದೊರೆಯಬಹುದೆಂದು ನಂಬಿದ್ದೇನೆ.

ತರುಣಧಮುನಿ ಒಂದು ಇಡಿಯ ರಚನೆಯಲ್ಲ; ದೊಡ್ಡದೊಂದು ಐತಿಹಾಸಿಕ ಕಾವ್ಯವನ್ನು ರಚಿಸಬೇಕೆಂದು ಮಾಡಿದ ಪ್ರಯತ್ನದ ಭಗ್ನಾವಶೇಷ. ಇದು ಸ್ವರ್ಗೀಯ ಗಳಗನಾಥರ 'ಕರ್ಮಕಥೆ'ಯ ಒಂದು ಪ್ರಸಂಗದ ರೂಪಾಂತರ. ಇಲ್ಲಿ ಕಾಣಿಸಿದ ಮಿಹಿರೆ (ಕರ್ಮಕಥೆಯ ಮೆಹೆರ್ ಜಾನ್) ಎಂಬವಳ ಪೂರ್ವವೃತ್ತಾಂತವು, ಮುಂದೆ ಮಾಡಲೆಳಸಿದ್ದ ವಸ್ತು ವಿಸ್ತರಣಕ್ಕಾಗಿ ಅಂದು ಕಲ್ಪಿತವಾದುದು. ಆದುದರಿಂದ ಇದೊಂದು ಖಂಡಕಾವ್ಯವಲ್ಲ, ಕಾವ್ಯದ ಖಂಡ ಎಂದೇ ಓದಬೇಕಾಗಿ ಅರಿಕೆ.

ಕೆಲವು ವರ್ಷಗಳಿಗೆ ಮೊದಲು ಶ್ವಮೇಧವನ್ನೂ ತರುಣಧಮುನಿಯನ್ನೂ ಪರೀಕ್ಷೆಯ ಪಠ್ಯಗಳಾಗಿ ನಿಯಮಿಸಿ ಅವೀಗ ಎರಡನೆಯ ಮುದ್ರಣವನ್ನು ಪಡೆಯುವಂತೆ ಉಪಕರಿಸಿದ ಮದ್ರಾಸು ವಿಶ್ವವಿದ್ಯಾಪೀಠದ—ಹಾಗೂ, ಈ ವರ್ಷ 'ಪ್ರವೀಣ' ಎಂಬ ಉಚ್ಚ ಪರೀಕ್ಷೆಗೆ ಶ್ವಮೇಧವನ್ನು ಪಠ್ಯವಾಗಿ ಮಾಡಿ ಪ್ರೋತ್ಸಾಹಿಸಿದ ದಕ್ಷಿಣ ಭಾರತ ಹಿಂದೀ ವಿದ್ಯಾಪೀಠದ ಅಧಿಕಾರಿಗಳಿಗೆ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಮಂಗಳೂರು,
೧—೧—೧೯೪೯.

ಸೇಡಿಯಾಪು ಕೃಷ್ಣಭಟ್ಟ.

ಪುಣ್ಯಲಹರಿ

ಪುಣ್ಯ ಲಹರಿ

ಅಥವಾ

ಶಬರಿ

— ಪಿರಿಯಕ್ಕರ —

೧

ವಿಂಧ್ಯಾಟವಿಯಲ್ಲಿ ಭಿಲ್ಲರೊಡೆಯನಲ್ಲಿ
ಹದಿನಾರು ತುಂಬಿದ ಕನ್ನೆ ತುಂಬಿ,
ಕಲ್ಲ ಪುತ್ತಳಿ ಜೀವನೆತ್ತರು ತುಂಬಿ
ನಲಿದಂತೆ ಸುಳಿದಳು ಮನೆಯ ತುಂಬಿ;
ಮೆಲ್ಲನೊಂದು ಬೆರಳಲಿ ಸಿಡಿಯೆ ರಕ್ತ
ಚಿಮ್ಮ ಬಹುದು!—ಎಂಬ ಪರಿಪೂರ್ಣಾಂಗಿ,
ಹಣ್ಣು ನೇರಿಲ ಹೊಗರ ಮೈ, ಹಾಲ್ಮನ,
ನುಣ್ಣನುಣ್ಣನೆ ಬೆಳಗುವ ಶಬರಿ.

೨

ಭಿಲ್ಲರೊಡೆಯನ ಮಗಳ ಮದುವೆಗೆಂದು
ಬಿಂಜದ ವನಕೆ ವಸಂತ ಬಂತು;
ಹೆಣ್ಣು ಜಾತಿಗೆ ಕಣ್ಣು ರಳಿತು, ನಗೆ
ಮಲ್ಲಿಗೆಯಾಯ್ತು, ಮೈಸಿರಿಯೇರಿತು;
ಮಲ್ಲಬಿಲ್ಲಾಳುಗಳ ಹೊಂತಗಾರಿಕೆ
ಕಾಡಿನ ಜಾಡ್ಯವ ಬಡಿದಟ್ಟಿತು;
ಚೆಲ್ವು ಚೆಲ್ಲಿತು, ಸಿಂಗರ ಸುರಿಯಿತು;
ಸೊಲ್ಲು ಸರಸವಾಯ್ತು, ಮದವುಕ್ಕಿತು.

೩

ನಾಳೆ ಮದುವೆಯು ವೇಳೆಯೆನಲ್ಕಿಂದು
ಬಾಲಿಕೆಯರ ತಂಡ ಬಿಜಯಿಸಿತು;—
ಕಾಡ ಕೋಗಿಲೆ ಮೇಳೈಸಿ ಕರೆದಂತೆ
ಮೋಹಿನಿಯರ ಹಾಡು ಮೋಹಿಸಿತು;
ಸಾಲುಸಾಲಾಗಿ ಸುತ್ತುತ ಸುಳಿಯತ್ತಾಗಿ
ಲೋಲಾಂಗಿಯರ ನೃತ್ಯ ಲೀಲೈಸಿತು;
ನೀರ ನೊರೆಯಂತೆ, ಬಾನಿನ ಹೆರೆಯಂತೆ,
ನೀಲಾಂಗಿಯರ ನಗೆ ದೀಪಿಸಿತು.

೪

ಹೊನ್ನ ಬೊಟ್ಟಿನ ಚೆಂಬುಲ್ಲೆತೊಗಲಿನ,
ಚಿಗುರಿನ ಹವಣಿನ ನಿರಿಯನುಟ್ಟು,
ಸಣ್ಣ ಬೆರಳಿನ ಕರಿಯ ಸುಂಡಿಲ ಕೈಗೆ
ಬಿಳಿಯಾನೆದಂತದ ಬಳೆಯ ತೊಟ್ಟು,
ಜೋಲ್ವ ಮುತ್ತಿನ ಸರವುಬ್ಬಿದೆದೆಯಿಂದ
ಭಾಗೀರಥಿಯವೋಲು ದುಮುಕುತಿರೆ,
ಬಾಲೆ ಹೊಳೆದಳು, ಮುಡಿಯ ನವಿಲ ಗರಿ
ನೀಲಮುಖಾಂಬುಜದೆಲೆಯಂತಿರೆ.

೫

—"ಭಿಲ್ಲತರುಣಹೃದಯವನಸಾರಂಗಿ!
ನಿಲ್ಲು ನಿಲ್ಲದೊ ಬಂದ ಬೇಟೆಗಾರ!
ಬಿಲ್ಲ ತಾಳ್ದ, ಹಿಡಿಯದಿರಲಾರ! ಹಿ-
ಡಿದು, ಬಿಡಲಾರದ ಬೇಟೆಗಾರ!
ನಲ್ಲನದೊ ಬಂದ, ನಗುತ ನಗುತ ನಿಂದ;
ಗಲ್ಲವು ಬಲುಚಂದ! ತನುವಿನಂದ,—
ಚಲ್ಲಗಾರ್ತಿ!—ಲಜ್ಜೆಗೆ ಮನೆಗತ್ತಿ; ಮ-
ದುವೆ ನಮಗರ್ತಿ, ಕುಣಿಯಲಾನಂದ!"—

೬

ಇಂತು ತರತರದಲಿ ಹಾಡಿ ನಲಿವ ವ-
ನಾಂತಸಖಿಯರು ಮೇಳದೊಳೊಪ್ಪಿರೆ,
ಅಂತರಂಗವರಳಿ ಶಬರಿಗೆ ಕಂಡಿ-
ತಂತವರೊಲೆವ ಕೈ-ಮೈ-ನಗೆಯೆ—
ಸಂತಸದ ತೆರೆ-ನೀರ್-ನೊರೆ ನೆಗೆಯುವ-
ನಂತಸುಖದ ಭವಸಾಗರವೆ
ಬಂತೊ ಬಳಿಗೆನೆ; ತೇಲಾಡಿದಳು! ಮುದು-
ಮಗಳೆ ಕುಣಿದಳು!! ಕೈಪರೆಗುಟ್ಟಿರೆ?

೭

ನಾಚಿ ಮನೆಯೊಳಗೋಡಿದಳಡಗಿದ-
ಳಾಳಿಯರೋಳಿ ಕುಣಿಯುತಲಿತ್ತು;—
ಆಚೆ, ಕಿವಿಗಳ ಕೀಲೈಸುವಂತಿರೆ
ಕೇಳದ ಕೂಗೊಂದು ಕೇಳಿಸಿತು!
ಏನಿದೇನೆಂದು ನೋಡಲು ನಡೆದಳು,
ಕಾಣದ ಹಿಂಡೊಂದು ಕಾಣಿಸಿತು!
ಗೇಣಿನಗಲದ ಕೂರ್ವಾಳ ಮಸೆಯುವ
ಕೀಳಾಳ ತಂಡ ಕೆಲದೊಳೊಗ್ಗಿತು!

೮

ಬಾಡುಗಿವಿಗಳ ನೀಡಿದ ಕೊರಳಿನ
ನೇಲುವ ಕೆಚ್ಚಲ ಮೇಕೆಗಳು,
ಬಾಲಗೊಂಬನು ಮೇಲೆತ್ತಿ ಗಡ್ಡದ
ಚೌಲಿಯು ಕುಣಿಸುವ ಹೋತಗಳು,
ಕೋಡ ಸುಳಿಯಲಿ ಕೂದಲ ಹೊದರಲಿ
ಮೈಮರೆದಡಗಿದ ತಗರುಗಳು,
ಕೂಗುತಿದ್ದವು;—ನೆತ್ತರ ಹೆಜ್ಜೇನ
ಹುಟ್ಟುಗಳಂತಿರೆ ಕಟ್ಟಿದ್ದುವು!

೯

ಕಾಡ ಮರೆಯಲಿ ಹೂವಿನಂತರಳಿದ-
ಮಾನಸಿಕೆಯು ಮುಗ್ಧೆ! ಕಂಡವಳೆ
ನಾಡ ನಡೆಗಳ? ಸಾಕಿದ ಕರುಗಳ
ಗೋಣ್ಮುರಿಯುತ ಬಾಡನುಂಡವಳೆ?
ಗೀಳಿಡುವ ಮದದಾನೆಯು ಸುಂಡಿಲ
ಕೂಗು ಕಹಳೆಯಾಗೆ, ಮೊನೆಗೊಂಬಿನ
ಕಾಡ ಮೃಗಗಳ ಗೆದ್ದುಂಬ ಗೆಲವಿಗೆ
ಜೋಡಿಯಹುದೆ ಕೊಲೆ ಕುರಿಯಾಡಿನ?

೧೦

"ನಿನ್ನ ಮದುವೆಯು ಬಿದ್ದಿನ ಹೊರೆಯಾಗಿ
ಬೆಣ್ಣೆ ಬೆಳೆವ ನಾಡ ಮಂದೆಗಳು
ಬಂದುವೆ"ನಲವರಲ್ಲಿಯೆ ನಿಂದಳು
ಕಣ್ಣೆವೆಯಲುಗದೆ ದೇವಿವೊಲು,—
ಚಿನ್ನ ಕರಗಿ ಕುದಿವ ಕೋವೆಯಂತಿರೆ
ತನ್ನಿದಿರಲಿ ರವಿ ಮುಳುಗುತಿರೆ,
ಹೆಣ್ಣೆದೆಯು ಕರುಣೆಯು ಕೆಂಡ ಕೆದರಿರೆ,
ಕನ್ನೆ-ಮೊಗದ ಕಾಂತಿ ಹೊಸತಾಗಿರೆ.

೧೧

ಬಾಳು ಮಿಂಚಿತು, ತೋಳು ಮೇಲೆತ್ತಿತು,
ಕೇಳಿತು ಕೀಳಾಳುಗಳ ಹುಂಕೃತ,
ಹಾರುತಿರೆ ರಕ್ತ! ಚೀರುತಲಿರೆ ಮೊತ್ತ!!
ತಾಳಲಾರದೆ ಬಾಲೆ ಕಂಗೆಡುತ,
"ಹಾಳು ಮದುವೆ"ಯೆಂದುಲಿದೊಳಸಾರ್ದಳು;—
ಮಾರಿಯೋಕುಳಿಯಿತ್ತ ಮುಸಗುತಿತ್ತು;
ಮೇಳವತ್ತ ಕುಣಿಯುತಿತ್ತು; ಶಬರಿಯ
ಬಾಳ ಮೊದಲ ಸಂಧಿ ಮುಗಿಯುತಿತ್ತು!

೧೨

ರಾತ್ರಿ ಸಂಜೆಯು-ಕಮ್ಮೆಣ್ಣೆ-ಸವರುತ
ಹೆರೆಯು ಹಣಿಗೆಯಲಿ ತಲೆಯು ಬಾಚಿ,
ತಾರೆಗಳ ಹೂವ ಮುಡಿದು, ತಂಗಾಳಿಯು
ತೆಳುಸೆರಗಿಳಿಬಿಟ್ಟು, ನಳನಳಿಸಿ
ಕಾಡಿನೆಡೆಯಲಿ ಬೆಳ್ದಿಂಗಳ್ನಗೆಯಲಿ
ಕಾಲಿಡುತಲಿ ಬಂದು ಮೋಹಿಸಿತು
ಜೀವರಾಶಿಯನಾದರೆ ಶಬರಿಯು
ಮಾನಸಹಂಸವು ಮಿಡಿಯುತಿತ್ತು!

೧೩

ಭೀಮಕಾಯದ ಭಿಲ್ಲರು ಮದ್ಯದ
ಭಾಜನಗಳನಪ್ಪಿ ಮಲಗಿದರು
ತಾಳೆ ಕೆಡೆದಂತೆ; ಕನ್ನೆಯರಲ್ಲಲ್ಲಿ
ಕುಣಿವ ಕನಸುಗಳನಪ್ಪಿದರು;
ಮಾನಿನಿಯರು ಮಕ್ಕಳನಪ್ಪಿ, ಕಾಡನು
ಕಾರಿರುಳಪ್ಪಿ, ನಿದ್ರಿಸುತಿರಲು,—
ಜೀವಮಣಿಯೊಂದು ಖನಿಯಿಂದ ನೆಗೆಯಿತು!—
ಧೀರೆ ಶಬರಿ ಹೊರಗಾಲಿಟ್ಟಳು!

೧೪

ಬಣ್ಣಬಣ್ಣದ ಬಡವುಜೀವಿಗಳನು
ಕೊಂದ ಮದುವೆ ಹೆಣ್ಣ ಮನಸಿನಲಿ
ಹುಣ್ಣ ತೋಡಿತು; ಸಂಸಾರದಾಶೆಯು
ಕಣ್ಣನು ಕಿತ್ತು ಗಂಟಲನೊತ್ತಿತು.
ಕಲ್ಲ ಸೆರೆಯಿಂದ ದುಮುಕುವ ತಿಳಿನೀರು
ಬಲ್ಲುದೆ ತನ್ನ ಗುರಿಯು ದಾರಿಯು?
ಪುಣ್ಯಪರಿಪಾಕದಂತೆ ಹರಿವುದಲ್ತೆ?
ಕನ್ನೆಯಂತಿರೆ ನುಗ್ಗಿದಳು ಮುಂದಕೆ.

೧೫

ಝಿಲ್ಲಿಗಳ ಜೀರುದನಿಯಲಿ ವಿಂಧ್ಯಾದ್ರಿ
ಕುಂಭಕರ್ಣನವೋಲು ಕೊರೆಯುತಿತ್ತು!
ಸಿಂಹ ಶೈಲದ ಶಿಖರದಿ ಮೃಗರಾಜ್ಯ-
ಸಿಂಹಾಸನವನೇರಿ ಮೊಳಗುತಿತ್ತು!
ಹುಲ್ಲ ಹಾಸಿಗೆಯಲಿ ವ್ಯಾಘ್ರದಂಪತಿ
ಗಂಭೀರನರ್ತನಭಂಗಿಗಳ
ಹೊಮ್ಮಿಸುತಲಿತ್ತು!—ಶಬರಿ ಮೈದೋರಿದ
ವಿಂಧ್ಯವಾಸಿನಿಯೆನಲಡಿಯಿಟ್ಟಳು!

೧೬

ಎಲ್ಲಿ ನಡೆದಳೊ, ಎಲ್ಲೆಲ್ಲಿ ಸುಳಿದಳೊ?
ಬಲ್ಲಳೆ ತಾನೆ ತನ್ನಯ ಮನಸು
ಕಲ್ಲೊ, ನೀರೊ, ಕುಳಿರೊ, ಕಿಚ್ಚೊ ಆಗಿರೆ?—
ನಿಲ್ಲದೆ ನಡೆದಳು ಹಗಲಿರುಳು;
ಕಣ್ಣ ಹೊಳಪಿಗೆ, ಕರೆಯುವ ಕರುಣೆಗೆ,
ಬಣ್ಣದ ನಿರಿಗೆ, ಹುಲ್ಲೆಗಳ ಹಿಂಡು
ತನ್ನ ಬಳಿಬರಲಪ್ಪಿ ಮುದ್ದಿಸಿ 'ತಂಗಿ!
ಅಣ್ಣ!' ಎಂದಳುತ ಮುಂದೈದಿದಳು.

೧೭

ಬೆಳ್ಳಿ ಮೂಡಲ ಮೂಗುತಿಯಾಗಿರೆ,
ಅಲ್ಲಲ್ಲಿ ತಂಗಾಳಿ ಚಿಗುರುತಿರೆ,
ಬಳ್ಳಿ ಗಿಡು ಹನಿಯಲಿ ಪುಲಕಿಸುತಿರೆ,
ಹೊಳೆ ಮಂಜುಮುಸುಕನು ನೂಕುತಿರೆ,
ಕಣ್ಣನರೆದೆರೆದುಬ್ಬಿಸಿ ಕೊರಳನು-
ಷಾಸೂಕ್ತವನು ಹಕ್ಕಿ ಹಾಡುತಿರೆ,
ಪುಣ್ಯಕಾಲದಿ ಶಬರಿ ಬಂದಿಳಿದಳು,
ಧನ್ಯಾತ್ಮೆ! ತುಂಗಭದ್ರಾತೀರಕೆ.

೧೮

ಕನ್ನಡದ ಗಿರಿಶೃಂಗರ್ಷಿಪುತ್ರಿಯ
ಮಂಗಲರೂಪವು ಮುಂದಿರಲು,
ಕಣ್ಣು ಜಕ್ಕುಲಿಸಿತು; ಪರವಶತೆಯೊ-
ಳುಣ್ಮಿತು ಮೊಗದಿ ಮುಗುಳ್ನಗೆಯು;
ಸಣ್ಣ ತೆರೆಗಳ ಮೆಲ್ನಗೆದುಟಿಗಳ
ನಿರ್ಮಲ ಧ್ವನಿಗಳ, ನುಣ್ಸುಳಿಯ
ಬೆಣ್ಣೆನೊರೆಗಳ, ಮುದ್ದುಹರಿವುಗಳ
ಚೆನ್ನೆ ಚುಂಬಿಸಿದಳಹೋ ಮನವ!

೧೯

ಹೂವುಗಳ ರಾಶಿಯನೆ ಬಾಚುವಂತಿರೆ
ಚಾಚಿ ಕೈಗಳ ನೀರ ಮೊಗೆಮೊಗೆದು
ತೋಂಕಿಕೊಂಡಳು, ತೆಗೆದಪ್ಪಿಕೊಂಡಳು;
ಮುಳುಗೇಳುತೀಸುತ ಕೆಳೆಗೊಂಡಳು;
ನೀರೊಳಾಡಿದಳ್ ನದಿಯ ಸೋದರಿಯಂತೆ;
ಮೇಲೆ ಬಂದಳು ಲಕ್ಷ್ಮೀದೇವಿಯಂತೆ;
ಮೂಡಲಿರೆ ಭಾನು ಕೊನರೆ ಪರ್ವತಸಾನು,
ತೆರೆಯಿತು ವನ್ಯಕುಸುಮದ ಸಂತೆ.

೨೦

ನಿಂದಳಲ್ಲಿ ಪುಲಿನಪುಂಡರೀಕದಿ
ತುಂಬಿಯೆಂಬಂತಿರೆ, ತಂಗಾಳಿಯ
ಮಂದ್ರನಾದಕೆ ಹೃದಯದ ರೋದನ
ಮಂದವಾಗಿರಲು ಲಲಿತಭಾವದ
ಬಂಧ ಸಡಿಲಿರೆ; ಮೂಡಿದ ಮೂಡಲ
ಹೊಂಬಿಸಿಲನು ಮೊಗೆಯುತ ಚೆಲ್ಲುತ
ಮುಂದಿರಲು ನಾಗಸಂಪಗೆ, ಕರೆವೆಳ-
ಗಂದಿಯಂತವಳೋಡಿದಳು ಹಾರುತ!

೨೧

ಸಾರಿ ಬಳಿಗೆ ಮರದ ಕಿರುಗೊಂಬನು
ಹಾರಿ ಹಿಡಿದು ಬಲಗೈಯಿಂದಲಿ
ಬಾಗಿಸುತ, ಮೇಲಕೆತ್ತಿದಳ್ 'ಮದರಂಗಿ'
ರಾಗಿಸುವೆಡಗೈಯ ವಹಿಲದಲಿ
ಹೂವ ಮುರಿಯಲೆಂದೊಡನೊಳಗಣ್ಣಿಗೆ
ತೋರಿತು ಕುರಿಯ ಕೊರಳ ತರಿವ
ಮಾರಿ ನೋಟವೆ! ಚೀರುತ ಕೈಬಿಟ್ಟು
ಹಾರೆದೆಯುಬಲೆ ಕುಸಿದು ಬಿದ್ದಳು!

೨೨

ಬೇಟೆಯುಂಬು ನಡಲು ಕುಣಿಯುವ ನವಿಲ್
ಸೋಗೆಯ ಮುದುರಿ ಕೆಡೆದು ನೆಲದಿ
ಕೀರುವಂತಿರೆ, ಬಾಲೆ ಮಳಲನಪ್ಪಿ
ರೋದಿಸುತಿರಲು ಹೊರಳಿ ಹೊರಳಿ,—
"ದೇವಿ! ನೀನಳಲೇಕೆ"ಂಬ ಗಂಭೀರ-
ವಾಣಿ ಕರ್ಣದಲಿ ಮೃದಂಗಿಸಿತು!
ತಾಯ ಕಾಲುಂಗುರದ ದನಿಯುಳುವೆಳ-
ಗೂಸನೆಂತಂತೆದೆದುಂಬಿಸಿತು.

೨೩

ತಿಳಿವೋ ದಯೆಯೊ ಪೊದಳ್ದಂತೆ, ನೈರ್ಮಲ್ಯ
ಮಡಿಯುಟ್ಟು ಬಂದಂತೆ, ಮುಂದಿರಲು
ಪುರುಷಾಕೃತಿಯೊಂದು,—ಕಂಡೆದ್ದು ಕಣ್ಬಿಟ್ಟು
ಭಯವಿಲ್ಲದಿದ್ದೊಂದು ನಡುಕಗೊಂಡು
ನಿಲಲಾರದೆ, ಕುದಿವೆದೆಯಿಂದ ನುಡಿಗಳ
ತೆಗೆಯಲಾರದೆ, ಬಾಲೆ ಕಂಬನಿಯ
ಹೊರಲಾರದೆ ಮುನಿಪದಕೆ ಬೀಳುತ್ತಿರೆ
ಹಿಡಿದಂ ಪೂಜೆಯ ಹೂವ ಹಿಡಿವಂತಿರೆ.

೨೪

ಯೋಗದೀಪವ ಬೆಳಗಿಸಿ ಶಬರಿಯ
ಹೃದಯಾಂತರಾಳವ ಮುನಿ ಕಂಡನು;
ದೇವನದಿಯ ನಿರ್ಝರದಂತೆ ಮೊರೆಯುವ
ಧಾರಾಲಕರುಣೆಗಚ್ಚರಿಗೊಂಡನು;
ಭಾವಮಂಟಪಮಧ್ಯದಿ ಹೊಳೆಯುವ
ರಾಗವರ್ಜಿತ ಚಿತ್ರಫಲಕವನು
ನೋಡಿ ತಲೆದೂಗಿ—'ವೈಕುಂಠನಿಲಯದ
ಶ್ರೀಮಂಚವಿದಕೆ ನಮೋ!'—ಎಂದನು.

೨೫

ರಾಮನಾಮಾಮೃತವನೆರೆದನು ಮುನಿ
ಬಾಲೆಯ ಹೃದಯದಕ್ಷಯ ಪಾತ್ರಕೆ;
ನೂರುಮಡಿಯಾಗಿ ತುಂಬಿತು! ಸಂತಾಪ-
ವಾರಿತು; ಸಾಯಲಾಗಿಹ ಮನಕೆ
ಜೀವ ಕೂಡಿತು; ಕರಣಸಂಕುಲ ಸೂರ್ಯ-
ಕಿರಣಕೆ ನಲಿಯುವಶ್ವತ್ಥದಂತೆ
ಡಾಳಗೊಂಡಿತು; ವಾಣಿ–'ರಾಮಾ!'–ಎಂದು
ವೀಣೆನುಡಿಸಲಾತ್ಮ ಲಾಲಿಸಿತು.

೨೬

"ಭಾಗ್ಯವತಿ! ನಿನ್ನ ಕಣ್ ಭಗವಂತನ
ಕನ್ನಡಿಯಾಗಲೆ"ನುತ ಹರಸಿ
ಯೋಗಿ ಬೀಳ್ಕೊಂಡು,—ಹಗಲ ಲೋಕಕೆ ಕೊಟ್ಟು
ಮರೆಯಾಗುವರುಣನಂತಿರೆ—ವನದಿ
ದಾರಿಹಿಡಿದನು, ಕಣ್ಮರೆಯಾದನು;—
ಹಾಡುತಲಿದ್ದವು ಹಕ್ಕಿಗಳು;
ನೋಡುತಿದ್ದನು ಬೆಳಗಿನ ರವಿ; ರಾಮ-
ನಾಮದೊಳರಳುತಿದ್ದಳು ಶಬರಿ.

೨೭

ಜೀವಿತಕೆ ಹೊಸ ಹೊಗರಾಯ್ತು, ಶಬರಿಯ
ಹೃದಯದ ರಿಕ್ತತೆ ಪರಿದೋಡಿತು;
ರಾಮಮೂರುತಿ ಭಿಲ್ಲಿತಿಯೊಲವಿನೊಳ್
ಭಿಲ್ಲಸುಂದರವಾಗಿ ನೆಲೆಗೊಂಡಿತು;—
ಶ್ಯಾಮಲಾಂಗದ, ಬಿಲ್ಲುಬತ್ತಳಿಕೆಯ,
ದೀನಕೃಪಾರಸದೃಷ್ಟಿಗಳ,
ಶ್ರೀಲಲಾಮದ, ವೀರವಕ್ಷದ ದಿವ್ಯ-
ಧಾಮ ಮನೋರಾಜ್ಯದೊಳಗಾಳಿತು.

೨೮

ಅಂದು ಮೊದಲು ಶಬರಿ ತುಂಗಭದ್ರೆಯ
ಸಂಗಿನಿಯಾಗಿ, ಬಳಿಯ ವನದ
ಬಂಧುವಾಗಿ, ದಯಾಮಕರಂದದ
ಮಂದಾರಲತೆಯಾಗಿ, ಜೀವನದ
ಒಂದೇ ಗುರಿ ರಾಮಚಂದ್ರದರ್ಶನವಾಗಿ,—
ತಿಂಗಳ ಬೆಳಕಿನ ಲಂಬಣದ
ಹಂದರವ ಹೋಲ್ವ ಮರದಡಿ ಮನೆಯಾಗಿ,—
ನಂದಾದೀವಿಗೆಯಂತೆ ಬೆಳಗಿದಳು.

೨೯

ಭವ್ಯಜೀವೆ ಚರಾಚರಜೀವದ
ಸಂವೇದನೆಯೊಳನುಕಂಪಿಸುತ,
ಕೊಯ್ಯದುದಿರಿದ ಹಣ್ಗಳ ಮೆಲ್ಲುತ,
ಮಣ್ಣಿಗೆ ಬಿದ್ದ ಹೂಗಳನೆತ್ತುತ,
ಒಂದೊಂದಾಗಿ ಹಣ್ಣೆಲೆ ಮಾಗಿಯಲಿ ಮರ
ದಿಂದ ಜಗುಳುವಂತೆ ಹರೆಯದಿಂದ
ಸಂದು ಹೋಗುತಲಿರೆ ವರ್ಷ, ಗಣಿಸದೆ
ಮುಂದಿನ ಸುಗ್ಗಿಗೆ ಮನವಿಟ್ಟಳು.

೩೦

ಚಂದ್ರಕಾಂತಿ, ಕೊನೆಯ ಜಾವದಲಿ, ಕಂದು-
ವಂತೆ ಯೌವನಕಾಂತಿ ಮಾಸುತಿರೆ,
ಬಾಂದಳದಿ ಹೆರೆಗಟ್ಟುವ ಮುಗಿಲಂತೆ
ಅಂಗಗಳಲಿ ವಲಿ ಹರೆಯುತಿರೆ,
ಇಂದ್ರದಿಶೆಯುಷೆಯನು ಪಡೆವಂತಿರೆ
ಮುಂದಲೆಯಲಿ ನರೆ ಮೂಡುತಿರೆ,
ವಂದಿಸುತ್ತಿರೆ ಮುನಿವೃಂದ, ಮುಗಿವ ವಿ-
ಭಾವರಿಯಂತೆ ಭಾವಿನಿಯಿದ್ದಳು.

೩೧

ನಂಬಿದವರೆದೆಯುಚ್ಚಿನಲೆರಕವ
ಕೊಂಬ ಮೆಯ್ಯ ಬೆಡಂಗ ಮೆಯ್ಗೊಂಡನು;
ತಂದೆ ತಾಯೆಂದು ನರರ ಕರೆದು, ಸೀತೆ-
ಯೆಂದಾತ್ಮಲಕ್ಷ್ಮಿಯನೊಡಗೊಂಡನು;
ಮಂಥರಾಗ್ನಿ ಮನೆಯ ಸುಡೆ ಚಾಗದ
ಗಂಗೆಯೊಳ್ ನಂದಿಸಿ ಹೊರವಂಟನು;
ಕಾಂತಾರವ ಹೊಕ್ಕು ತ್ರೇತಾಯುಗದ ಭಾಗ್ಯ
ಸಂಚರಿಸಿತು!—ರಾಮ ಚರಿಸಿದನು.

೩೨

ಮಾಯಾಮೃಗವನಟ್ಟುವ ನೆವದಲಿ ಭಿಲ್ಲ-
ಲೀಲೆಯ ಕೈಕೊಂಡು, ನಾರೀತ್ವದ
ಮಾನಮೇರುವನೆತ್ತಲರ್ಧಾಂಗಿಯ
ನೇಮಿಸಿ ನಗಧಾರಿ, ಕುಂತಳದ
ಭೂಮಿ ಸುರಭಿಕರೆಯೆ ನಡೆತಂದನು;—
ನೀರು ತುಂಬಿತು ತುಂಗಭದ್ರೆಯಲಿ!
ದಾರಿ ಮಿಂಚಿತು! ಶೈಲವು ನಮಿಸಿತು!
ಬಾನಿಂದ್ರಚಾಪಧ್ವಜವನೆತ್ತಿತು!

೩೩

ಸಕಲೇಂದ್ರಿಯವಂತರ್ಮುಖವಾಗಿ ರಾಮನ
ಚರಣನಖಾಗ್ರದಿ ನಿಂದಿರಲು,
"ಶಬರೀ!" ಎಂದು ದೇವಧ್ವನಿ ಕಿವಿಯಲಿ
ಜಯಘಂಟೆಯಾಗಿ ನಿನಾದಿಸಿತು;
"ಪ್ರಭುವೇ! ಬಂದೆಯ!" ಎನುತ ಪುಣ್ಯದ ಕಣ್ಣ
ತೆರೆದಳು, ಪರಮತೇಜವ ಕಂಡಳು!
ಯಮುನಾನದಿ ಭಾನುಬಿಂಬವರಳೆ ನಲಿ-
ನಲಿವಂತೆ ಜಗಜಗಿಸುತ ನಿಂದಳು!

೩೪

ಮೇಘಮಾಲೆ ಮಿಂಚಿನೊಳಾಡುವಂತಿರೆ
ದೇವನ ಬಳಸಿ ಪ್ರಭಾಮಂಡಲ,
ಶ್ಯಾಮಶೋಭಾಂಗದರಸಾಗಿ ತಂಪಿನ
ಸೂರ್ಯನಾಗಿರೆ ದಿವ್ಯಮುಖಮಂಡಲ,
ಧ್ಯೇಯವೇ ನೂರುಮಡಿ ಚೆಲ್ವಗೊಂಡು ದ-
ಯಾಘನವಾಗಿ ಬಳಿಗೆ ಬಂದಿರೆ,—
ದೇಹದಳವು ಸುಖದಿ ತುಂಬಿ ತುಳುಕಿತು
ಮೈಯೆಲ್ಲ ಮಧುರಮಧುರವಾಯಿತು.

೩೫

ರೋಮರೋಮದಿ ನಗೆ ಸೂಸುತಿರೆ, ಕಣ್ಣ
ಕೇದಗೆ ಮಘಮಘಿಸಲು, ಬಾಷ್ಪದ
ವಾರಿ ನವನವನಕ್ಷತ್ರಮಾಲೆಯ
ಜೋಲಿಸುತಿರೆ, ಹಜ್ಜೆಯಲಿ ನೆಲವೆ
ಹೂವಿನಂತರಳುತಿರೆ ಶಬರಿ ಬಂದು,
ದೇವಗಂಗೆಯ ತಾಯಿತಂದೆಗಳ—
ರಾಮನಡಿಗಳ—ಹಿಡಿದಪ್ಪಿಕೊಂಡಾಡಿ
ಮುಂಡಾಡಿ ಕಾಂತಿಯ ಮುಡಿದಳಹೋ!

೩೬

ತೋಳುಗಳ ಹಿಡಿದೆತ್ತಿದ ವಿಶ್ವದ
ತಾಯಿಗೆ, ಕಂಪಿಸುವಂಜಲಿಯು
ಸೂಡಿದಳು ತನ್ನ ಭಾಲಾಗ್ರದಲಿ; ಜಗ-
ದಾಲಂಬಕಾರ್ದ್ರಕರಾಲಂಬವ
ನೀಡಿ ಕರೆತಂದು, ಮರದಡಿಯಲಿ ಪುಷ್ಪ-
ವಾಸಿತ ಪುಲಿನದಿ ಕುಳ್ಳಿರಿಸಿ,
ಪೂರ್ವಭವಗಳನೆಂಬಂತೆ ಬಕುಲದ
ಮಾಲೆಯನೊಪ್ಪಿಸಿದಳು ಕಂಠಕೆ.

೩೭

ಝಲ್ಲನಲ್ಲಲ್ಲಿ ಮಿಂಚಿ ಹಣ್ಗಳ ಹೆಕ್ಕಿ
ಮೆಲ್ಲನೊರಸಿ ಕರಕಮಲದಲಿ
ಮಲ್ಲಿಗೆಯ ಹಲ್ಲೊಳರೆಗಚ್ಚಿ, ಸವಿನೋಡಿ
ಭಿಲ್ಲಿತಿ ಮುಗ್ಧ ಮಹಾಯೋಗಿನಿ
"ಮೆಲ್ಲ ಮೆಲ್ಲೆ"ಂದು ನೀಡಲು,—ಕೆಂಬಾಯ
ಫುಲ್ಲಿಸಿ, ಕರುಣಾತರಂಗಗಳು
ಕಣ್ಣ ವಾರಿಧಿಯೊಳಗುಯ್ಯಲಾಡುತ
ಸಂಮೋದಿಸುತಿರೆ, ಸವಿಯುತಿದ್ದನು.

೩೮

ಜನ್ಮಜನ್ಮಾಂತರದ ಹರ್ಷಗಳು ಹೊಸ
ಹೊನ್ನ ಘಂಟಿಕೆಗಳಂತವಯುವದಿ
ಗೊಂಚಲಿಸಿ ಕಿಂಕಿಣಿಸುತಿರೆ, ಮಿಂಚಿದ
ಬಾಲ್ಯಗಳೊಂದಾಗಿ ನಗೆಮೊಗದಿ
ಸಂಚರಿಸುತಿರೆ, ಸಕಲ ಪ್ರಪಂಚವೆ
ರಸವಾಗಿ ಹೊಳೆಯಂತೆ ಕಣ್ಗಳಲಿ
ತಂಪಿಸುತ ಹರಿಯುತ್ತಿರೆ, ಜೀವದ
ತಂತಿ ಝೇಂಕರಿಸೆ, ನರ್ತಿಸುತಿದ್ದಳು.

೩೯

ದೇಹಭಾವವ ಮರೆದು, ದೈವಿಕನೃತ್ಯ-
ಭಾವವರಳಿ, ದೇವಬಾಲೆಯಾಗಿ,—
ಪಾದಮೂಲದಿ ಹರಿದು ಜಾಹ್ನವಿಯಾಗಿ,
ಹಾಡಿ ಹೊಗಳುತ ವಾಗ್ದೇವಿಯಾಗಿ,
ನೋಡಿ ವಾತ್ಸಲ್ಯಭರದಲಿ ಕೌಸಲ್ಯಾ-
ದೇವಿಯೆ ತಾನಾಗಿ, ಸಲುಗೆಯಲಿ
ರಾಮಭದ್ರನ ವರದಹಸ್ತಾಬ್ಜದ
ಸೋದರಿಯಾಗಿ,—ನೋಂತಳು ಶಬರಿ!

೪೦

ರಾಮರಾಮೆಂಬ ನಾದದಿ ವನವೆಲ್ಲ
ಲೀನವಾಯಿತು; ರಾಮಚಂದಿರನ
ಶ್ರೀಮುಖದ ಮಂದಹಾಸದಲುಕ್ಕಿತು
ಕ್ಷೀರಸಾಗರ! ಭಿಲ್ಲನಂದಿನಿಯು
ಬೋಧವಖಿಲಬ್ರಹ್ಮಾಂಡಬುದ್ಬುದಗಳು
ತೇಲುವಾನಂದರಸವ ಕಂಡಿತು!
ಜೀವ ಜಳಜಳಿಸಿತು, ದೇಹ ಕರ್ಪೂರ-
ವಾಗಿರೆ, ಮಂಗಳಾರತಿಯೊಪ್ಪಿತು!

೪೧

ದೇವದೇವನ ಫುಲ್ಲಪದಾಬ್ಜಪ-
ರಾಗನವೀನಸುಗಂಧವಾಗಿ,
ರಾಮನಾಮಮಹಾಸಂಗೀತದ ನವ್ಯ
ರಾಗಿಣಿಯಾಗಿ, ಪರಂಜ್ಯೋತಿಯ
ತೇಜದೊಂದೆಸಳಾಗಿ, ನಿತ್ಯಾನಂದ-
ಲೀಲೆಯ ನವಮಂದಹಾಸವಾಗಿ,
ಕೇವಲಬ್ರಹ್ಮರಸವಾಗಿ ಪರಿಪೂರ್ಣ-
ವಾದಳಾದಳು ಸತ್ಯ-ಶಿವ-ಸುಂದರಿ!

೧೯೩೯ ಶಿವರಾತ್ರಿ.

ಶ್ವಮೇಧ

— ತ್ರಿಪದಿ —

ಎಲೆಲೆ ಮಲ್ಲಿಗೆ! ನಿನಗರಸಿಯ ತುರುಬಿನ
ಸೊಬಗು ಬೇಕೆಂಬ ಮನವಿರೆ ಬಡವೆಯ
ಮನೆಯ ಬಾಗಿಲಲಿ ಮೊಗದೋರು

ಶ್ವಮೇಧ

ಅಥವಾ

ನಾಯ ನಡತೆ.

‘ನಾಯಿಬಾಳ ಬಾಳ್ದನೆ’ಂದು ಹೀನಜನವ ಹಳಿಯುವವರೆ!
ಕೇಳಿ ನಾಯಿಯೊಂದು ನಡೆದ ನಡತೆಯನ್ನು, ನಿಮ್ಮ ಮನದ
ಭಾವ ಬದಲದಿರದು; ಕಣ್ಣ ನೀರು ಸುರಿಯದಿರದು; ಮನುಜ-
ಮಾನಭೂಮಿ ಕುಸಿದು, ಹೃದಯಕುಹರ ಬಾಯ ತೆರೆಯದಿರದು.
ಹಾಳು-ಕಟ್ಟುಕತೆಯಿದಲ್ಲ, ನೋಡಬಹುದು **ನರಿಮೊಗರಲಿ**
ನಾಯಿ ಮಲಗಿದೆಡೆಯ ಮೇಲೆ ಮಾಡಿಸಿದ ಸಮಾಧಿ—ಒಡೆಯ
ಬೀಡುಗೊಂಡ ಬಳಿಯೆ, ಚಳಿಯ ಗಾಳಿಮಳೆಯ ಬಿಸಿಲ ಜಳವ
ತಾಳಿ, ಮೇಲೆ ಹುಟ್ಟಿ ಸಾವ ಹುಲ್ಲ ಬಾಳುಬೀಳುಗಳಲಿ
ಬೀಗಿ-ಬತ್ತಿ, ಕರುಣಕಥೆಯ ಹಾಡುವುದನು; ಕಲ್ಗಳೆಲ್ಲ
ಕೇಳಿ ಮೈಯ ಮರೆದಿಹುದನು, ಬೋಳುಗುಡ್ಡ ಬಿದ್ದಿಹುದನು!

ಅಲ್ಲೆ ಹತ್ತಿರದಲಿ ಮೊದಲು ನೆಲ್ಲುಬೈಲ ಮೇಲೆ ಮುಳಿಯ-
ಹುಲ್ಲ ಮಾಡಿನಡಿಯಲೊಬ್ಬ ಜೈನನಿದ್ದನವನ ಹೆಸರು
ಧರ್ಮರಾಯಸೆಟ್ಟಿ; ಅವನ ಗುಣವು ಮೇಲೊ, ಹೆಸರು ಮೇಲೊ
ಎನ್ನಲಾರೆ. ಕೈಯ ಹಿಡಿದ ಸುದತಿ ಪದ್ಮವತಿಯ ಶೀಲ
ವಲ್ಲಭನಲಿ ಎರಕವಡೆದೊ, ತಾಯ ಬಳಿಯೆ ರೂಪುಗೊಂಡೊ
ಚಿನ್ನನಾದುದೆಂದು ತಿಳಿಯೆ. ಆದರವರ ನಲ್ಮೆಯೆಂಬ
ಬೆಲ್ಲವಚ್ಚುಗೊಳ್ಳಲಿಲ್ಲ, ಮುದ್ದುಗೂಸು ಮೂಡಲಿಲ್ಲ;
ಹೊಲದ ಮನೆಯ ಕೆಲಸ ಮುಗಿಯೆ ಮನದ ಮೋದಕೇನು ಇಲ್ಲ!

ಮನದಲಂಪನಿಡಲಿಕಾಗಿ ಕರಡಿಗೆಯನು ತಂದನೇನೊ?
ಚೆಲುವಿನೊಂದು ಮರಿಯ,-ಹೊಳೆವ ಕರಿಯ ಮೈಯ, ನೇರಗಿವಿಯ,

ಹರಳುಗೆಂಪು ತೆತ್ತಿದಂತೆ ಮಿರುಗುತಿರುವ ಮೂಗುಮೊನೆಯ,
ಕಿರಿಯ ಕಣ್ಣು, ಬೆರಳ ಸರಿಯ ಬಾಲವಲೆವ, ಕೋಲುಗಾಲ,
ಚಿವುಟಿ ಕೈಗೆ ಸಿಕ್ಕದಿರುವ ಮುಟ್ಟೆ ಮೈಯ ಜಕ್ಕುಲಿಸುವ
ನಯದ ರೋಮ ಹೊದೆದ ನಾಯಿ—ಮನೆಗೆ ಸೆಟ್ಟಿ ತಂದನೇನೊ?
ಬಿಳಿಯ-ಸೀಮೆನಾಯಿಯಲ್ಲ, ಹಡಗಿನಿಂದ ಹಾರಿ ಬಂದು
'ಟಾಮಿ' 'ಟೈಗ'ರೆಂಬ ಬಿಂಕದಂಕದಿಂದ ಬೆಳೆದುದಲ್ಲ
ಹಳೆಯ ಕಾಲ, ಬಿಳಿಯ ಬಣ್ಣ ಬಂದು ಕಣ್ಣ ಬೆಳಗಲಿಲ್ಲ;
ಕರಿಗಳಂದು ಕಾಡನಿಳಿದು ನಾಡ ಪಶುಗಳಾಗಲಿಲ್ಲ.
ಬಡವನೊಡ್ಡ ದೂಮನವನ ಹರಿದ ಹೆಡಗೆಯಲ್ಲೆ ಕಣ್ಣ
ತೆರೆದ ಬಡವು ಕರಿಯ ನಾಯಿ; ಪದ್ಮವತಿಯ ಕೈಯ ಹಾಲ
ಕುಡಿದು ಕುಣಿದು, ಸೆಟ್ಟಿಯಡಿಗೆ ಎಸಳುನಾಲಗೆಯಲಿ ಪೂಜೆ-
ಯೆಸಗಿ ಭಕ್ತಿಯಲ್ಲಿ ಮಣಿದು ಮಡಿಲ ಬೇಡಿ ಪಡೆದು, ಕೊರಳ
ತೊಡೆಯಲಿಟ್ಟು ಕಣ್ಣನರ್ಧಮುಚ್ಚಿ, ಕಂಠ ಕೂಜಿಸುತಿರೆ—
ಒಡೆಯನೆದೆಯ ಕೋಟರದಲಿ ಪವಡಿಸಿದ್ದ ಪುತ್ರಮೋಹ
ತೆರೆದು ಕಣ್ಣ ಕೆದರಿ ಗರಿಯ ಹಾರಿ ಕೈಯ ಮೇಲೆ ಕುಳಿತು-
ಕೊಳಲು ನಡುಗುತಿರುವ ಬೆರಳು ತಲೆಯ ಹರಸೆ ಬೆನ್ನ ಸವರೆ—
ಬಾಲ ಸುಖದ ಭಾರದಲ್ಲಿ ತೊನೆಯುತಿರಲು ಬಳೆದು ಬುದ್ಧಿ-
ಕಲಿತು ಬಲಿಯಿತದು, ವಿಧೇಯತೆಯನು ಒರೆವ ಕಲ್ಲೊ, ಒಡೆಯ-
ನಪ್ಪಣೆಯನು ತೊಡುವ ಬಿಲ್ಲೊ ಎನಲು; ಸೆಟ್ಟಿಯದರ ರೂಪ
ಗುಣಸಮೃದ್ಧಿಗಳನು ಬಗೆದು ಹೆಸರನೆರಡನಿಟ್ಟನದರ
ಚೆಲುವಿಗಾಗಿ ಚಂದುವೆಂದು, ಬುದ್ಧಿಗಾಗಿ ಬಂಟನೆಂದು.

ಹಗಲು ಸೆಟ್ಟಿಗಾಯ್ತು ಚಂದು ಗೆಡೆಯ ಬಿಡದ ಗೆಳೆಯ, ಕೊಡುವ
ತರುವ ಕೆಲಸದಾಳು, ಬೆನ್ನ ಬಳಿಯೆ ಮೈಯ ಕಾವ ಬಂಟ;
ಇರುಳು ಕಾಲ ದಿಂಬು, ಮಕ್ಕಳಿರದ ಶೂನ್ಯಶಯ್ಯೆಗಿಂಬು,
ಜಡಿವ ಕತ್ತಲೆಯಲಿ ನುಸುಳಿ ಸುಳಿವ ದುರುಳರಳ್ಳೆಗಂಬು;
ಒರಗುತಿರುವ ವೇಳೆ ಮನೆಯೊಳಡಿಯಿಡುವರ ಮೇಲೆ ಬೀಳ್ವ

ಸಿಡಿಲು; ಕಾರ್ಯವಶದಲೊಡೆಯು ದೂರಕ್ಕೈದೆ ಬರುವ ವರೆಗೆ
ಮನೆಗೆ ಕೋಟೆ, ಒಡತಿಯುಡಿಯು ನಿಧಿಗೆ ಕೃಷ್ಣಸರ್ಪವೆನಲು,
ಪಡೆವ ಪುಣ್ಯವಿಲ್ಲದಾಯ್ತೊ ಹಲವುಗಾಲವಿಂಥ ನಾಯ!
ನೆರೆಯ ಹಳ್ಳಿಯಲ್ಲಿ ಗುಮ್ಮಣಾಳ್ವನೆಂಬ ಧನಿಕನಿದ್ದ
ಹಣದ ಪೆಟ್ಟಿಗೆಯಲಿ ತನ್ನ ಹರಣವೆಲ್ಲವಿಟ್ಟು, ಕಣ್ಣ
ರಕುತವೆಲ್ಲ ಮಾರಿ, ಬಡವರವಸರದಲಿ ಪ್ರೇತದಂತೆ
ಹಿಡಿದು ಬಿಡದೆ ಪೀಡಿಸುತ್ತ; ನಡೆವ ತನ್ನ ಹೆಣವ ಹೊರದ
ಅಬಲಗವನೆ ಕಾಲ, ಮಲೆವ ಸಬಲಗವನೆ ಸಾನುಕೂಲ.
ಅವನು ತೆಗೆದ ಮನೆಗಳೆಷ್ಟೊ, ಸುಲಿಗೆ ಮಾಡಿದೊಕ್ಕಲೆಷ್ಟೊ,
ಹಟವ ಸಾಧಿಸಲ್ಕೆ ಗೈದ ವ್ಯಕ್ತ-ಗುಪ್ತವಧೆಗಳೆಷ್ಟೊ!
ಅವನ ಮನೆಯು ಮೂಲದಾಳು, ಅವನ ಬಡಿಗೆಯುಂಬ ಕೂಳು,
ಕುಡಿಯನೊಬ್ಬನೊಂದು ದಿವಸ ಒಡೆಯನಡಿಗೆ ನಮಿಸುವಾಗ
ಬಿರಿವ ಬಾಸುಳಿಂದ ಬೆನ್ನು ಬಾಗಲಿಲ್ಲವೆಂದು, ನೂಕಿ
ತುಳಿದು ಜಪ್ಪಿ ಗುದ್ದುತಿರುವ ಧನಿಯು ಕೆಡೆದ ಕಾಲಹುಳುವ-
ನಕಟ! ಕಂಡ ಧರ್ಮರಾಯ ಸೆಟ್ಟಿ ತನ್ನ ಕೆಲಸದಲ್ಲಿ
ನಡೆಯುತಿರಲು ಬಂಟನೊಡನೆ;—ಮನವು ಕರಗಿ ಹರಿದು ಹೋಯ್ತು,
ಬುದ್ಧಿ ಮುರುಟಿ ಬಾಡಿ ಬಿತ್ತು, ಜೀವ ಕೆಂಡಕೆಂಡವಾಯ್ತು,
ದೇಹ ಕಲ್ಲಿನಂತೆ ಇತ್ತು, ಮಾತು ನಾಲಗೆಯಲಿ ಸತ್ತು
ಹುಟ್ಟಿ ನರಳಿ ನೆಗೆದುದಿಂತು—"ಸಾಕು, ಸಾಕು, ಆಳ್ವರೇ!
ಕೋಪ ಬಂತು ನಿಮಗೆ ಎಂದು ಪಾಪದವನ ಕೊಲುವುದೇನು?
ಮೂಲದವನ ದೇಹದಲ್ಲಿ ಮೂಳೆಯಿಲ್ಲವೇನು?" ಎಂದ
ಮಾತು ನಾಟಿ ಮುಷ್ಟಿ ಸಡಿಲೆ, ಕಣ್ಣು ಕಿಸುರ ಲಜ್ಜೆಯೊರಸೆ,
ಮೋರೆಯೊಳಗೆ ಹುದುಗುತಿರುವ ಗೌರವಕ್ಕೆ ಧೈರ್ಯವಿತ್ತು
ರೋಷ ನಾಲಗೆಯಲೆ ನಿಂತು ಮೂದಲಿಸಿತು—"ಮೂಲದವಗೆ
ನೀರನೆರೆದ ಕೈಯ ತಡೆವ ಬೀರನಹೆಯೊ ಸೆಟ್ಟಿ ನೀನು?
ಆಳುಗಳನು ಕಾಂಬ ಬಗೆಯನೆಮಗೆ ಕಲಿಸಬಂದೆಯೇನು?

ಆದರಿರಲಿ, ಜೈನನಲ್ತೆ! ನಿನಗೆ ಕರುಣೆ ಮೀರಿ ಹರಿವು-
ದಾದರಿವನ ಬಿಡಿಸಿಕೊಂಡು ಮೂಳೆ ಮಾಂಸ ಬೆಳೆಸಬಹುದು;
ಖೂಳಹೊಲೆಯನಿವನಕಾಲನೊತ್ತಬಹುದು, ನಮಿಸಬಹುದು!
ಆದರೇನೊ ಸೆಟ್ಟಿ? ಹಣದ ಚೀಲವಿದೆಯೊ, ಹರಿದುಹೋಯ್ತೊ?
ಮಾಡು ಸೋರಿ ಸೋರಿ ಮನೆಗೆ ನೀರು ತುಂಬಿ ತೇಲಿ ಹೋಯ್ತೊ?"
ಮೂದಲೆಗಳ ಕೊಳ್ಳಿ ಬಡತನವನು ಕೆದರೆ, ಕೆಂಡದಂತೆ
ಮಾನ ಕನಲೆ, ನುಡಿದ ಸೆಟ್ಟಿ:—"ಬಡವರಹುದು ನಾವು, ನಿಮ್ಮ
ಮೂರು ದಿನಕೆ ಬಾಳ್ವ ಬೀಡು ಭಾಗ್ಯವಿಲ್ಲ, ಬೇಡವೆಮಗೆ!
ದೀನಸೇವೆ ದಿನದಿನಕ್ಕೆ ದೊರೆಯಲದುವೆ ಸಾಕು ನಮಗೆ.
ಆಗಲೇನು? ನಿಮ್ಮ ಬದುಕನಿದನು ಕೊಳ್ಳಿ! ಮೂಲದವನ
ಬೀಳುಗೊಡಿರಿ!" ಎನುತ ತನ್ನ ತಾಯಿ ಸೊಂಟಕಿಟ್ಟ ಹೊನ್ನ-
ನೇವಳವನು ನೂಕಿ ಮುಂದಕೊಗೆಯಲಾಳ್ವ ಕೊಂಡು ನಗುತ—
"ಧೀರ! ಕಲಿಯುಗಕ್ಕೆ ಬಾಹುಬಲಿಯೆ! ಮೆಚ್ಚದಿಹರೆ ನಿನಗೆ?
ಆದರಕಟ ಕುಡಿಯನಿದಕೆ ಸೋಲಲಾರ! ನಮ್ಮ ಸಾಲ
ಹೋಗಲಾರದಯ್ಯ! ಇದರ ಮೇಲೆ ಹತ್ತು ವರಹವಿತ್ತು
ಮೂಲದವನ ಬಿಡಿಸಿ ಪುಣ್ಯಮಾಡಬಾರದೇನು?" ಎನಲು—
"ಮೂಲದವನ ಶುಲ್ಕವನ್ನು ಕೇಳದಾವು ತೊಡವನಿತ್ತ
ಬಾಲಿಶತೆಗೆ ನಗುವಿರೇನು? ಮಾನವನಿಗೆ ಬೆಲೆಯ ಮಾಡೆ
ಬಾಗಲಿಲ್ಲವೆಮ್ಮ ಮನವು; ನೀವು ಮನಕೆ ಬಂದ ಬೆಲೆಯ
ಹೇಳಬಹುದು; ಕೊಡುವುದಕ್ಕೆ ಜಾರುವವನೆ ಸೆಟ್ಟಿ? ತನ್ನ
ಮಾರಿಯಾದರಿವನ ಬಿಡಿಪ ಭಾವದವಗೆ ಹತ್ತು ವರಹ
ಹೇಳಿ ಬಡವನೆಂಬ ಕೃಪೆಯ ತೋರಿದುದಕೆ, ಸುಜನತೆಯನು
ಬೀರಿದುದಕೆ, ಋಣಿಗಳಾವು. ಆದರೊಂದು ಸಲುಗೆಯಿದನು
ಪಾಲಿಸುವಿರೆ? ಈಗ ಕೈಯೊಳಿಲ್ಲ, ಸುಗ್ಗಿ ಕೊಯ್ಲ ಸಮಯ-
ಕೀವೆ, ಶಾಂತಿನಾಥನಾಣೆ!" ಎಂದ ಸೆಟ್ಟಿಗಾಳ್ವನೆಂದ:—
"ಆಣೆಗೀಣೆ ಸಾಲದೆಮಗೆ! ಮಾತು ಗಾಳಿಯೊಂದು ಸುಳಿಯು.
ಕಾಸು ಮುಖಕೆ ನಗೆಯುದಣ್ಣ! ಜೀವುತಿರುವೆ ನಾಲಗೆಯನು!"

ಬಡವನೆದೆಯು ಬೆಂಕಿಯೆಲ್ಲ ಒಡಲ ವಿವರಗಳಲಿ ಸೂಸೆ,
ಸುಡುವ ಕಣ್ಣ ಕುಲಿಮೆಯಲ್ಲಿ ಕರಗಿ ರೋಷ ಹರಿಯೆ, ಒಡೆದು
ಸಿಡಿಯುವಿಂದ್ರಿಯಗಳ ಬಲದಿ ನಿಲಿಸಿ ಸೆಟ್ಟಿ ನುಡಿದನವಗೆ,
ಹರಿವ ಮಡಕೆಯಿಂದ ಅರಳ ತೆಗೆದು ಕೊಡುವ ತೆರದಲಿಂತು:—
“ಮಾತ ಹಳಿಯಬೇಡಿ! ಮನುಜನೊಂದು ಮಹಿಮೆ ಮಾತಿನಲ್ಲಿ
ಮಾತು ದೇವನೊಂದು ಶಕ್ತಿ, ಮಾತೆ ಜೀವನೊಂದು ಜ್ಯೋತಿ;
ಮಾತು ನೀತಿಗಳಿಗೆ ತಾಯಿ, ರೀತಿಗಳಿಗದೇ ವಿಧಾಯಿ;
ಮಾತು ಸತ್ಯವುಡುವ ಧೌತ, ಜೀವನದ ರಥಕ್ಕೆ ಸೂತ.
ಮಾತ ಕೆಡಿಸಿ ಸುಖಿಪೆನೆಂಬ ಪಾಪಿ ನರಕಕೂಪಭೇಕ!
ಸಾಕದಿರಲಿ, ಆಳ್ವರೇನ ಭಾವಿಸಿದಿರೊ! ಬಡವನಾಗೆ,
ಮಾತು ಬಡವೆ? ನೀತಿ ಬಡವೆ? ಧರ್ಮರಾಯ ಸೆಟ್ಟಿ ನುಡಿದ
ಮಾತ ನುಂಗಿದುದನು ಕೇಳಿಯಾದರರಿವಿರೇನು? ನಾವು
ಹುಸಿವ ಮಾತ ಬಿಡಿರಿ, ನಮ್ಮ ಕೈಯ ತಿಳಿಯ ನೀರ ಕುಡಿದ
ಸೊಣಗನಾದರೇನು ನಂಬುಗೆಯನು ತಪ್ಪಿ ನಡೆವುದುಂಟೆ?”
ಸೆಟ್ಟಿ ನೊಂದು ನುಡಿದ ಸತ್ಯವಾಕ್ಯವೆದೆಯ ಕುಂತದಂತೆ
ಕುತ್ತುತಿರಲಸತ್ಯಪಂಕ ಚಿಮ್ಮಿದಂತೆ ಮೊಗವು ಕಪ್ಪ-
ನಪ್ಪೆ, ಗುಮ್ಮಣಾಳ್ವ ಕಿರಿದು ಹೊತ್ತು ಮೌನವಿದ್ದು, ತನ್ನ
ವಿತ್ತದಾಶೆ ಮಾನಭಂಗದಿಂದ ಮೊಗವನಿನಿತು ಬಾಗೆ,
ಸತ್ಯಬಂಧನದಲೆ ಬಿಗಿದು ಸತ್ಯಮುದವನಿಳಿಪೆನೆಂದು
ಚಿತ್ತದಲ್ಲಿ ಬಗೆದು, ನುಡಿದನಿಂತು:—“ಸೆಟ್ಟಿ! ನಿನ್ನ ಮಾತು
ಒಪ್ಪವಿಟ್ಟ ಚಿನ್ನ; ತಲೆಯ ತೂಗಬೇಕು; ಆದರೊರೆದು
ನೋಳ್ಪ ಬಯಕೆ ನಮಗೆ. ನಿನ್ನ ಹೆಸರಿಗಿಂತ ನಿನ್ನ ನಾಯ
ಕೀರ್ತಿಯೂರ ಹಬ್ಬಿರುವುದು, ಬಲ್ಲೆವಾವು. ಅದನು ನಮಗೆ
ಒತ್ತೆಯಿಟ್ಟು ಮಾತ ಸಲಿಸು! ಮೂಲದವನ ಬಿಟ್ಟೆ!” ಎಂದು
ಕಡ್ಡಿ ಮುರಿದು ನೆಲಕೆ ಬಿಸುಡೆ, ಕಾಲ್ಗೆ ನಾಟಿದೊಂದು ಮುಳ್ಳ
ಕಿತ್ತ ತೆರದಿ ವೇದನಾನುಭೂತಿ-ನಿರ್ವೃತಿಗಳು ಸೆಟ್ಟಿ-
ಗಾಯ್ತು ಚಂದುವಗಲಿಕೆಯಲಿ-ಕುಡಿಯಗಾದ ಬಿಡುಗಡೆಯಲಿ.

ಇನಿತು ತಾಳಿ, ನಿಟ್ಟುಸಿರನು ಕಳೆದು, ಸೆಟ್ಟಿ ನುಡಿದ:—"ನುಡಿಯ
ರಭಸದಲ್ಲಿ ತೇಲಿದುದನು ಹಿಡಿದಿರಾದರೇನು? ದೈವ
ತೆರೆದ ಪಥದಿ ನಡೆಯುವಾಗ ತಿರುಗಿ ನೋಳ್ಪರಲ್ಲ ನಾವು.
ಹಿಡಿಯಿರಿದಕೊ! ಅಡವನಿಟ್ಟೆ; ತಿಂಗಳವಧಿ ಬೆಳೆವುದಕ್ಕೆ;
ಒಡನೆ ನಿಮ್ಮ ಋಣವ ಸಲಿಸಿ ಬಿಡಿಸಿಕೊಂಬೆನೆನ್ನ ಮನೆಯ
ಮಣಿಯ ಸೊಡರನಿದನು, ಜೀವರತುನಬೊಂಬೆಯಿದನು, ರೂಪು-
ವಡೆದ ಧೈರ್ಯವಿದನು, ತಾಳ್ಮೆಯೊಡಲನಿದನು, ಎನ್ನ ನುಡಿದ
ನುಡಿಗೆ ವಜ್ರಕವಚವಿದನು!" ಎನುತ ಬಳಿಕ ಚಂದುಗೆಂದ;—
"ಅಣುಗ ಬಾರೊ, ಬಂಟ! ಮನುಜಗಾದ ಪಶುತೆಯನ್ನು ನೀಗೆ
ಪಶುವೆ ನೀನೆ ನೋಂತೆ! ನಿನ್ನ ಅಡವನಿಟ್ಟೆನಾಳ್ವರಲ್ಲಿ.
ಬಿಡಿಸಿಕೊಂಬ ವರೆಗೆ ಅವರ ಪದವ ಬಿಡದೆ ಸೇವಿಸುವುದು;
ಅವರ ನುಡಿಯನೆನ್ನ ನುಡಿಯೆನುತ್ತ ನಡೆಸುತಿಹುದು, ಮರೆಯ
ದಿರೆಲೊ ಕಂದ! ಚಂದು!" ಎಂದು ನುಡಿಯೆ ಕಣ್ಣನೀರ ಬಿಂದು
ಜಗುಳೆ, ಸೆಟ್ಟಿ ಚಂದುವೊಡಲ ಪಿಡಿವ ಕೊನೆಯ ಸೊಗವನುಂಡು
ಬಿಡಲು,—ಗುಮ್ಮಣಾಳ್ವ ಮನದಿ ಹಲವ ಕಟಕಟಿಸುತ, ಮೊಗದಿ
ಹುಲುನಗೆಯನು ಸಿಗಿದು, ನಾಯ ಬಳಿಗೆ ಕರೆಯೆ,—ಸನ್ನೆಗಳಲಿ
ಒಡೆಯನಂತರಂಗವರಿತು, ಪದದ ರಜವ ಮೂಸಿ ಮುಡಿದು,
ಸರಿದು ಆಳ್ವನೆಡೆಗೆ, ಕಲ್ಲ ನಟ್ಟ ತೆರದಿ ನಿಂದುದಾಗ.

ಬಳಿಕ ಸೆಟ್ಟಿ—"ಕುಡಿಯ! ನಿನ್ನ ಋಣವು ಹರಿದು ಹೋಯ್ತು; ನಿನ್ನ
ಮನೆಗೆ ಹೋಗೊ! ಸೊಗವ ಹೇಳೊ! ಇಷ್ಟು ದಿವಸ ನಿನ್ನ ಬೆನ್ನ
ಬಿಸಿಗೆ ಕರಗಿದವಳ ಮೈಯ ತಣಿಸೊ! ಮನಕೆ ಬಂದ ಕಡೆಯ-
ಲರಸಿನಂತೆ ಬದುಕಿ ಬಾಳೊ ಹಲವು ಕಾಲ!" ಎಂದು ಮೈಯ
ತಡವಿ ಹರಸೆ; ಹರ್ಷವಾರಿಗಳಲಿ ಸೆಟ್ಟಿಯಡಿಯ ನಾಂದಿ,
ಗದಗದಿಸುವ ಕಂಠದಿಂದ ಕುಡಿಯ ನುಡಿಯನುದುರಿಸಿದನು:—
"ಕನಸೊ ನನಸೊ ಬಗೆಯಲಾರೆ, ಇರುಳೊ ಹಗಲೊ ಹೇಳಲಾರೆ,
ಬದುಕೊ ಸಾವೊ ತಿಳಿಯೆನಿದನು; ನರನೊ ದೇವರೇನೊ ಎಂದು

ಅರಿಯೆ ನಾನು ನಿಮ್ಮ; ಪದದ ಬಳಿಯ ಬಿಡೆನೆ"ನುತ್ತ ಕಾಲ
ಹಿಡಿಯೆ, ಸೆಟ್ಟಿ—"ಬೇಡ! ನಿನ್ನ ತೆರದ ಬಡವನೊಬ್ಬ ನಾನು;
ಬರಲು ನಿನ್ನ ಒಡಲಿಗೇನ ಕೊಡಲಿ? ಅಕಟ! ಹೋಗು," ಎಂದು
ಕಳುಹೆ, ಕುಡಿಯನಾಳ್ವಗಿದುವೆ ಕೊನೆಯದೆಂದು ಅಂಜಲಿಯನು
ಬಿಗಿಯೆ, ಮುಸುಕುಮುಸುಕಿನೊಳಗಿನಿಂದ ನುಡಿದ ಹುಂಕೃತದಲಿ
ತಿಳಿದು ಆಳ್ವನೊಪ್ಪಿಗೆಯನು, ಮಗುಳೆ ಸೆಟ್ಟಿಗೆರಗಿ, ಅಂದೆ
ನಡೆದ ಮಡದಿಮಕ್ಕಳೊಡನೆ; ನೆರೆಯ ಊರೊಳೊಕ್ಕಲಾದ.

* * * * *

ಚಂದು ಗುಮ್ಮಣಾಳ್ವನೊಡನೆ ಮೈಯ ನೂಕಿ ನೂಕಿ ಮುಂದೆ
ಮುಂದುವರಿಯುವುದನು ಬಿಟ್ಟ ಕಂಗಳಲ್ಲಿ ನೋಡಿ ನೋಡಿ
ನಿಂದ ಸೆಟ್ಟಿ, ರೂಪು ಮಾಸೆ ಕಣ್ಣು ಮುಸುಕೆ, ಥಟ್ಟನೇನೊ
ಒಂದ ನೆನೆದು, ಗುಮ್ಮಣಾಳ್ವನೆಡೆಗೆ ಓಡಿ ನುಡಿದನಿಂತು:—
"ಆಳ್ವರೆನ್ನ ಬಿನ್ನಹವನು ಲಾಲಿಸುವಿರೆ? ಎಮ್ಮ ಚಂದು
ಹಾಲ ಕುಡಿದು ಹಾಸಿಗೆಯಲಿ ಬೆಳೆದ ಕಂದ! ಮೈಗೆ ಕಡ್ಡಿ
ಸೋಂಕದಿರುವ ಸುಂದರಾಂಗ! ಸಾಕಿದೊಂದು ಮೋಹ ನಿಮ್ಮ
ಕಾಲ ಹಿಡಿದು ಬೇಡಿಸುವುದು; ಬೇನೆ ಬೇಸರಾಗದಂತೆ
ಕಾಯಬೇಕು ಕರುಣೆಯಿಟ್ಟು, ಬೇರೆ ಮಾತು ನಮ್ಮದಲ್ಲ!"

ಗುಮ್ಮಣಾಳ್ವ ಗಹಗಹಿಸುತ ಸೆಟ್ಟಿಗೆಂದ–"ಲೋಕದಲ್ಲಿ
ನಿನ್ನದೊಂದೆ ನಾಯೆ? ಕರುಣೆಯೆಲ್ಲ ನಿನ್ನ ಸೊತ್ತೆ? ಮನುಜ-
ರಲ್ಲವೇನೊ ನಾವು? ಬಾರಿಬಾರಿಗೆಮಗೆ ಬುದ್ಧಿಹೇಳ್ವ
ಬಲ್ಲತನವ ಸಾಕುಮಾಡೊ!" ಎನಲು ಸೆಟ್ಟಿ ಮನದ ಕಿಸುರ-
ನೆಲ್ಲನಲ್ಲೆ ಮುಚ್ಚಿ, ಸಮಯವಲ್ಲವೆಂದು ಬಾಯ ಮುಚ್ಚಿ
ತನ್ನ ಮನೆಯ ಹಾದಿ ಹಿಡಿದ; ಕಣ್ಣಿನಲ್ಲಿ ನೀರ ಹಿಡಿದ!

ಎದೆಯ ಗುಂಡಿಗೆಯನು ತೆಗೆದ ಬರಿಯ ದೇಹವಾಗಿ ಸೆಟ್ಟಿ
ತೆರಳೆ, ಬಾಳೆಯಿಂದ ಮುರಿದ ಮೋತೆಯಾಗಿ ಚಂದುವಿರಲು;
ಬಡವು ನಾಯ ಭಂಗಗೊಳಿಸಿ ಸೆಟ್ಟಿ ನುಡಿದ ಮಾತ ಕೆಡಿಸಿ

ಅವನ ಮನೆಯ ಸೂರೆಗೊಂಡು, ತನ್ನ ವಿಾಸೆಗೊಂದು ಹುರಿಯ
ಹೆಚ್ಚಿಸುವುದಕೆಂದು, ತನ್ನ ದೇವಿ ಲೋಭವೆಂಬ ಮಾರಿ
ಮೆಚ್ಚುವಂತೆ ಬಲಿಯನೊಂದ ಕೊಚ್ಚಲೆಂದು, ಕಲ್ಮನದಲಿ
ಮಸೆದು ಹಲವು ಹಂಚಿಕೆಗಳ ಹರ್ಷಗೊಂಡ ಗುಮ್ಮಣಾಳ್ವ.
ಬಳಿಕ ನಾಯಿ ಬಂದ ಬವಣೆಗಳನು ಸಾಂಗವಾಗಿ ಬರೆಯೆ
ಒಸರದಣ್ಣ ಲೆಕ್ಕಣಿಕೆಯೆ! ಮನುಜನೆದೆಯ ಹುತ್ತದಲ್ಲಿ
ಹುದುಗಿ ಬಾಳ್ವ ಹಿಂಸೆಯೆಂಬ ಸರ್ಪಕೆಷ್ಟು ಹಲ್ಲೊ! ಅದರ
ವಿಷವಿಕಾರವೆಷ್ಟು ವಿಧವೊ! "ಹೊರಡು, ಹೊರಡೆ"ನುತ್ತ ಮಸೆದ
ಕಸೆಯ ಕೋಲ ಬಡಿಗಳಿಂದ ಹೊಲಿದ ಅಂಗಿಯಾಯ್ತು ಮೈಯ
ತೊಗಲು, ಬಿಸಿಲ ಜಳಕೆ ಬಿಗಿದ ಸಂಕಲೆಯಲಿ ಬೆಂದು ಸುಲಿದ
ಕಳಲೆಯಾಯ್ತು ಕೊರಳು, ಅನ್ನವಿರದೆ ಜಾಠರಾಗ್ನಿಗೊತ್ತ-
ತಿರುವ ತಿದಿಯುದಾಯಿತಳ್ಳೆ; ಆದರೇನು? ತನ್ನ ಒಡೆಯ
ನುಡಿದ ಮಾತು ತೊಗಲಿನೊಡನೆ ಜರಿಯಲಿಲ್ಲ, ಬಿಸಿಲಿನಲ್ಲಿ
ಒಣಗಲಿಲ್ಲ, ಹಸಿವಿನಲ್ಲಿ ಕರಗಲಿಲ್ಲ. ಆಳ್ವನಟ್ಟ-
ಲೋಡಿಯೋಡಿ ಮನೆಯ ಸುತ್ತುವರಿವುದಲ್ಲದೇನು ಮದಿಲ
ಹೊರಗೆ ಕಾಲಿಡುವುದೆ? ತೋಳ ಸರಿಗೆಯುದುರಿ ಬೀಳ್ವ ವರೆಗೆ
ಹೊಡೆಯೆ ಹೊರಳಿ ಮೆಟ್ಟಿಲಲ್ಲಿ ಅಳುವುದಲ್ಲದೇನು ಕಣ್ಣ
ಕೆದರಿಸುವುದೆ? ಅಗುಳನಿಡದೆ ದಿನವೆ ಹೋದರೇನು, ಒಡಲು
ಕರುಳ ಹಿಂಡಲೇನು, ಆಳ್ವ ಬಳಿಗೆ ಬರಲು ಬಾಲವಲುಗಿ
ಪದವ ಹಿಡಿವುದಲ್ಲ'ದೆಲ್ಲಿ ಹಸಿವ ಮಾರಲೆ'ಂದು ಹುಡುಕೆ
ನಡೆವುದೇನು?—ನಾಯ ಸುಲಿವ ನರಕದಾಳ ಕೈಯ ತಡೆವ
ಸಲುಗೆಯಾರಿಗುಂಟು? ಧೈರ್ಯವಾರಿಗುಂಟು? ನೋಡಿ ನೋಡ-
ದಿರುವ ತೆರದಿ ನಡೆದುದೆಲ್ಲ ಬುದ್ಧಿ ಬೆಳೆದ ಮನೆಯ ಮಂದಿ.
ಆಳುವ ಚಂದುವೆಡೆಗೆ ಬಂದು ಮಕ್ಕಳೆಲ್ಲ ಕಂಬನಿಯಲಿ
ತೊಳೆದುವದನು; ಗುಂಡನೆಂಬ ಅಣುಗನೊಬ್ಬ ಕಸೆಯ ಕೋಲ
ಕಳವುಮಾಡಿ ತರಿದು ಹುಗಿದ; ಆಳ್ವನಿಲ್ಲದಿರುವ ವೇಳೆ

ಮನೆಯ ಕೆಲಸದವಳ ಮಗಳು ಮಡಿಲಲಿದ್ದ ಕಡಲೆಗಳನು
ತುರುಕಿ ನಾಯ ಬಾಯಿಗೋಡಿ ಮದಿಲೊಳಡಗಿ ಕುಳಿತಳವಳು.

ಚಂದುಗಾದ ಭಂಗಗಳನು ಕಂಡು ಬೆಂದು ಹಗಲು ಮೂರು
ಸಂದು ಹೋಯ್ತು; ಬಳಿಕ ದೈವವಿಂದ್ರಜಾಲದಾಟವಾಡ-
ಲೆಂದು ರಂಗರಚನೆಗೈದು ಮುಂದೆ ಕರಿಯ ತೆರೆಯನಿಳಿಸಿ-
ದಂತೆ ಬಂತು ರಾತ್ರಿ, ಭಯವೆನಿಪ್ಪ ಶಿಶುವನುಣಿಪ ಧಾತ್ರಿ.

ಜಗದ ಭಾಗ್ಯವೆಂಬ ಪಣದ ಪಗಡೆಗಾಯ್ಗಳಂತೆ ಬಾನ-
ದಗಲದಲ್ಲಿ ತಾರಗೆಗಳು ನಡೆಯುತಿರಲು; ಗುಮ್ಮಣಾಳ್ವ
ಬಡವರೆಲುಬಿನೊಟ್ಟಿಲಂತೆ ಭಯಗೊಳಿಸುವ ಹಣದ ರಾಶಿ
ಬಳಿಯೊಳಿರಲು ಗೃಹದ ಗರ್ಭದೊಳಗೆ ಗುಹೆಯೊಳಿರುವ ಹುಲಿಯು
ತೆರದೊಳೊರಗಿ, ಕನಸನೊಂದ ಕಾಣುತಿದ್ದ:— ತನ್ನ ಕೈಯ
ಹೊಡೆತದಲ್ಲಿ ಚಂದು ಸಾಯೆ, "ಕೊಡುಕೊಡೆನ್ನ ನಾಯ ತೋರು !
ಸುಲಿದು ತಿಂದೆಯೆಲ್ಲಿ ಹೊಲೆಯ?" ಎನುತ ಸೆಟ್ಟಿ, ತಾನದಾರ
ಮನೆಯನೆಲ್ಲ ಮಾರಿಸಿಹೆನೊ ಅವರ ಕೂಡಿ ಬಂದು, ತನ್ನ
ಹಿಡಿದು ಉರಿವ ಬಿಸಿಲಿನಲ್ಲಿ ಬಿಗಿದು ಕಟ್ಟಿ ಹೊಡೆಯುತಿರಲು,
ನರಳಿ ತಾನು 'ಅಯ್ಯೊ!' ಎಂದು ತೆರೆಯೆ ಬಾಯ, ತುಳಿದು ಹಲ್ಲ
ಮುರಿದು, ತನ್ನದೊಂದೆ ಶಿಶುವನೆಳೆದು ತಂದು ತರಿದು ಬಾಯ್ಗೆ
ತುರುಕಿ ಮಗುಳೆ ತುಳಿದು ಗಂಟಲೊಳಗೆ ಜಡಿಯೆ ಮಡಿಯಲಾದೆ-
ನೆನುವ ಘೋರವಾದ ಕನಸ, ತನಗೆ ಮುನಿದ ತನ್ನ ಮನಸ,
ಸಹಿಸಲಾರದೆದ್ದು ಹಾರಿ ಚೀರಿ ಬೀಳೆ, ಹೊರಗಿನಿಂದ
ಬಹಳ ರವವು ಕಿವಿಯ ಸೀಳೆ, ಒಡನೆ ಓಡಲೆಳಸಿ ಬಾಗಿ-
ಲಿರುವ ತಾಣ ದೊರೆಯದಿರಲು ಮರುಳಿನಂತೆ ಪೊರೆದು ಕೂಗೆ,—
"ಅರರೆ ಬೆಂಕಿ! ಬೆಂಕಿ!! ಆಳ್ವರಾಳ್ವರೆ"ಂದು ಬೊಬ್ಬಿಡುತ್ತ
ಮನೆಯ ಮಂದಿ ಬಂದು ಬಾಗಿಲೊದೆದು ಮುರಿಯೆ, ಆಳ್ವನೆದೆಯೆ
ಧಗಧಗಿಸಿದ ತೆರದಿ ಮನೆಯ ಮುರಿದು ತಿಂಬ ಹವ್ಯವಾಹ-
ನುರುಕರಾಲನೇತ್ರಕಿರಣಝರಿಯೆ ಧುಮುಕೆ ಶಯನಗೃಹಕೆ,

ಕಡಿದ ಮರದ ತೆರದಿ ಗುಮ್ಮಣಾಳ್ವ ನೆಲವನೆರಗೆ, ಹೊತ್ತು
ಹೊರಗೆ ತಂದು ನೀರ ತಳಿಯೆ ತೆರೆದುದಾಗಲವನ ಕಣ್ಣು!

ಅಲ್ಲಿ ನಿಂದು ನೋಡಲೇನು! ಯಮುನ ವರಿಸಲೆಂದು ಹೊರಟ
ಸಿರಿಯ ಸಿಂಗರಿಸಿದ ತೇರೊ! ಎನಲು ತೋರಿ, ಭೋರಿಡುತ್ತ
ಉರಿಯುತಲಿದೆ ಕುಣಿಯುತಲಿದೆ ಆಳ್ವನಾಳ್ವ ಬೀಡು! ಭಾಗ್ಯ
ಚೆದರಿದಂತೆ ಉದುರಿದಂತೆ, ಕೆದರುತಲಿದೆ ಕೆಂಡ, ಜಗುಳು
ತಲಿದೆ ಬೂದಿ; ನೋಳ್ಪ ಕಣ್ಣನೊಡೆಯುವಂತೆ, ಮನೆಯ ಗಂಟ-
ಲೊಡೆಯುವಂತೆ ಒಡೆಯುತಲಿದೆ ಮಾಡ ಬಿದಿರ ಗಂಟು; ಬದುಕ-
ನುಳಿಸೆ ಧಾವಿಸುವರ ತೋಳೆ ಮುರಿಯುವಂತೆ ಮುರಿಯುತಲಿದೆ
ಮನೆಯ ತೋಳು. 'ಗುಮ್ಮಣಾಳ್ವ! ಬಳಿಗೆ ಬಾರೊ! ಸಿರಿಯ ಕರುಳ
ಸವಿಯ ನೋಡೊ!' ಎಂದು ಬೆಂಕಿ ನಗುವ ತೆರದಿ ಉಗಿವ ತೆರದಿ
ಕರವ ನೀಡಿ ಕರೆವ ತೆರದಿ ನೆಗೆಯುತಿತ್ತು, ಭುಗಿಲುತಿತ್ತು!

—ಚಾವಡಿಯಲಿ ಮಲ್ಲರಾಯಭೂತಕೊಪ್ಪಿಸಿದ್ದ ಹಳೆಯ
ತೂಗುಮಂಚವಿತ್ತು, ಅದಕೆ ಎಂದಿನಂತೆ ಸಂಜೆಯಲ್ಲಿ
ಆಳ್ವ ತಾನೆ ದೀಪವಿಟ್ಟು ಕೈಯ ಜೋಡಿಸಿದ್ದನದರ
ಜೋತಿಯೇ ನಿಮಿತ್ತವಾಗಿ ಭೋಂಕನೆದ್ದುದಲ್ಲಿ ದೈವ-
ದಾಟದಾರಭಟೆಯ ವಹ್ನಿ. ಭೂತಭಯದಿ ಚಾವಡಿಯಲಿ
ಆವ ಗಂಡನಾದರಲ್ಲಿ ಮಲಗನಿದ್ದುದೊಂದೆ ಚಂದು,
ಹೀರುವವನ ಹಾರಯಿಸುತ ನೀರ ಗಿಂಡಿ ಕಾದಿಹಂತೆ.
ಕಾಣುತೆದ್ದ ಕಿಚ್ಚ, ಬಂಟ ಘೋರರವದಿ ಮೊರೆದುದಾದ-
ರೇನು? ಗಾಢನಿದ್ರೆಯಲ್ಲಿ ಗೂಢವಾದ ಮನೆಯ ಮಂದಿ
ಕೇಳಲಿಲ್ಲ, ಕೇಳಿದವರು ಏಳಲಿಲ್ಲ ನಾಯಿಗೇನೊ
ರೋಗವೆಂದು. ಬಳಿಕ ಚಂದು ಮನೆಯ ಬಳಸಿ ಕಿಟಿಕಿಗಳಿಗೆ
ಹಾರಿಹಾರಿ ಗರ್ಜಿಸಲ್ಕೆ,—"ಹಾಳು ನಾಯ ಕೊಲ್ವೆನೆ"ಂದು
ಖೂಳ ಮುದುಕನೊಬ್ಬ ಬಡಿಗೆಗೊಂಡು ಬಾಗಿಲನ್ನು ತೆರೆದು
ಕಂಡು ಬೆಚ್ಚಿ "ಬೆಂಕಿ!" ಎಂದು ಹಾರಿ ಕೂಗೆ, ಎಲ್ಲರೆದ್ದು

ಓಡೆ ಹೊರಗೆ; ಆಳ್ವ ಕಾಣದಿರಲು ತಂದರವನ. ಈಗ
ತಾನದಾರ ದೂರಲಹುದು? ತನ್ನ ಕೈಯೆ ತನ್ನ ತನುವ
ಹೂಳಿತೆಂದು ಹಣೆಯ ಮೇಲೆ ಕೈಯ ಹೊಡೆದುಕೊಂಡನಾಳ್ವ!
ಮನೆಯನಪ್ಪಿ ಮದದ ಬೆಂಕಿ ಮದಿಲ ಮುದ್ದಿಸಿತ್ತು; ಆಳ್ವ
ಸೆರೆಯಲಿಟ್ಟ ಸಿರಿಯ ಜುಟ್ಟು ಅದರ ಹಿಡಿಕೆಯಲ್ಲಿ ಇತ್ತು.
ಎಳೆದು ತರುವ ಹೊಂತಗಾರನಾರೊ? ಬದುಕಿನಾಸೆತೊರೆದು
ಬದುಕುವಾಸೆವಿಡಿದು ಮದಿಲ ಬಾಗಿಲಿಂದ ನುಸುಳಿ ಹೊರಗೆ
ನಡೆದುದೆಲ್ಲ ಬಲದ ಚಲದ ಮಂದಿಯೆನಲು, ಅಬಲೆಯರಿಗೆ
ಸಿರಿಯ ಹಂಗೆ? ಕೈಗೆ ಬಂದ ಹಸುಳೆಗಳನು ಹಿಡಿದುಕೊಂಡು,
'ಯಮುನ ಉಕ್ಕಡವನು ದಾಟಿ ನೆಲದ ನೀರ ಋಣದಿ ಬಂದೆ'-
ವೆನುತ ಸತಿಯರೆಲ್ಲ ಮಜಲುಗದ್ದೆಯಲ್ಲಿ ಗುಂಪುಕೂಡೆ—
ಬಳಿಗೆ ಆಳ್ವ ಬಂದು—"ಮನೆಯ ಜನವದೆಲ್ಲ ಬಂತೊ? ನಿಮ್ಮ
ಶಿಶುಗಳೆಲ್ಲ ಬಳಿಯೊಳಿರುವುವೇನು? ನಮ್ಮ ಕಣ್ಣ ಬೊಂಬೆ
ಕಮಲೆಯೆಲ್ಲಿ?" ಎಂದ ಮಾತು ಎಲ್ಲರೆದೆಯನೇಕಸಮಯ-
ದಲ್ಲಿ ಬಗಿದು ಹೊಗಲು, ಆಳ್ವನರಸಿ—"ಪೊನ್ನಿ, ಪೊನ್ನಿ! ತರಲೆ
ಇಲ್ಲವೇನೆ ಮಗುವ ನೀನು? ಅಯ್ಯೊ! ಪಡುವ ಸಾಲೆಯಲ್ಲೆ
ಎನ್ನ ಚಿನ್ನವುಳಿಯಿತಯ್ಯೊ! ಎನ್ನ ಜೀವವೇಕೆ ಹೋಗ-
ದಯ್ಯೊ? ಪೊನ್ನಿ, ಎನ್ನ ಪೂರ್ವಕರ್ಮ ದಾದಿಯಾಗಿ ನಿನ್ನ
ನಮ್ಮ ಮನೆಗೆ ತಂದಿತಯ್ಯೊ! ಹೆತ್ತು ಹೆತ್ತು ಸತ್ತು ಉಳಿದ
ಬಿತ್ತು ಬೆಂದಿತಯ್ಯೊ! ಸುಟ್ಟ ಸಿರಿಯ ನಂಬಿ ಮಾವನೆನ್ನ
ಕೊಟ್ಟು ಬೀಡುಮನೆಯಿದೆಂದು ಕೊಂದನಯ್ಯೊ!" ಎಂದು ಜೀವ
ದಕ್ಕಿಸಲ್ಕೆ ಓಡುವಾಗ ಮಗಳ ಮರೆದು ಬಂದ ತಪ್ಪ
ಸಿಕ್ಕಿದವರಿಗೆಲ್ಲ ಹಂಚೆ, ಸತಿಯರೆಲ್ಲ ರುದಿತದಲ್ಲಿ
ಕುಳ್ಕುದಿಯುವಗುಳ್ಗಳಾಗೆ; ಗುಮ್ಮಣಾಳ್ವ,—ಕಂಡ ಕನಸೆ
ಮುಂದೆ ಬಂದು ನಿಂದಿರಲ್ಕೆ ಗರ್ವಧಾತುವೆಲ್ಲ ಕರಗಿ
ಕಣ್ಣಿನಲ್ಲಿ ಸೋರೆ, ಹೆರರ ಹೀರಿ ಬೆಳೆದ ಕೊಬ್ಬು ಹೊಟ್ಟೆ-

ಯುರಿದ ಬೆಂಕಿಗಾರೆ, ಕಿರಿಯ ಹಸುಳೆಯಂತೆ ರೋದಿಸಿದನು:—
"ಫಲಿಸಿತೆನ್ನ ಪಾಪ! ಬಡವನೆಳೆಯ ಮಕ್ಕಳುಂಬ ತುತ್ತ-
ನೆಳೆದ ಶಾಪ! ರಮಣ ಬರುವ ಪಥವ ಕಾದು ಹಸಿದು ಕುಳಿತ
ಸತಿಯ ಕಿವಿಗೆ ಸೀಸವೆರೆದು ಕೊರಳ ತಾಲಿಗಡಿದ ತಾಪ!"
ಎನುತ ಸುರಿದ ಹಸುಬೆಯಂತೆ ಕುಸಿದು ಬೀಳೆ, ಆಳ್ವನರಸಿ—
"ಬದುಕಲಾರೆ! ಮಗಳನುಂಡ ಬೆಂಕಿಗೆನ್ನ ಹುಡಿಪೆನೆ"ನುತ-
ಲೋಡೆ, ಕೆಲಬರೆಳೆದು ತಡೆದು ಹಿಡಿದು ನಿಲಿಸೆ; ಕೆಲಬರಾಗ
ಕೂಸ ತರುವೆನೆಂಬ ಮನಸು ಮೀರಿ ಮುಂದೆ ಸಾರೆ, ಬೆಂಕಿ
ಹಾರಲೊಡನೆ ಕಾಲು ಹಿಂದೆ ಜಾರೆ ನಡುಗಿ ನಿಂತರಲ್ಲೆ!

ಕೆಂಡದೊಳಗಿದೊಂದು ಮಸಿಯ ಖಂಡವೇಸೊ? ಎಂದು ನೋಳ್ಪ
ಗಂಡರೆಲ್ಲ ಕಣ್ಣ ಬಿಡಲು, ಬಾಗಿಲಿಂದ ದುಮುಕಿತಾಗ!
ಕಂಡು "ಆಹ!" ಎಂದು ವಹ್ನಿಘೋಷವಡಗುವಂತೆ ಬೆರಗು-
ಗೊಂಡು ಬೊಬ್ಬಿರಿದರು. ಆಳ್ವನೆದ್ದಿದೇನಿದೇನೆನುತ್ತ
ಮುಂದಕೋಡೆ—ಬಾಯ ತೆರೆದ ಸಿಂಹದೊಡಲ ಹೊಕ್ಕು ಕವಳ-
ಗೊಂಡ ಹರಿಣಶಿಶುವನೆಳೆದು ತಂದುದೇನು? ಮೃತ್ಯು ಮುಡಿದ
ಕೆಂಡಸಂಪಗೆಯನು, ಶಿಖೆಯ ಸುಲಿದು, ತಂದುದೇನು? ಎಂಬ
ಚಂಡತೆಯನು ಸೂರೆಗೊಂಡು; ಇಕ್ಕಳಲ್ಲಿ ಅಮುಕಿ ಅಗ್ನಿ
ಕುಂಡದಿಂದ ಕುಂದಣದಲಿ ಸಮೆದ ಬೊಂಬೆಯೊಂದ ತಂದ
ಚಂದದಲ್ಲಿ ಹಿಡಿದು ದೀರ್ಘತುಂಡದಲ್ಲಿ, ಹೂವಿನೊಂದು
ಮಂಜರಿಯಲಿ ಚಿಗುರಿನಂತೆ ರಸನೆಯೊಪ್ಪಿ ಸೊಬಗನಪ್ಪಿ,
ಚಂದು ಶಿಶುವ ತಂದು, ತನ್ನ ಜೀವನಕ್ಕೆ ಕಲಶವಿಟ್ಟ
ಅಂದದಲ್ಲಿ ಆಳ್ವನಡಿಯ ಬಳಿಯಲಿಟ್ಟು ನಿಂದುದಾಗ.

ಮೊಟ್ಟೆಯೊಡೆದು ಹೊರಗೆ ಬಂದ ಗಿಳಿಯಮರಿಯ ತೆರದಿ ನಲಿವ
ಪುಟ್ಟುಕೂಸ ಪಡೆದು ಕೊಂಡುಕೊನೆಯರಾರೊ? ದೈವ ಮಡಿಲೊ-
ಳಿಟ್ಟ ತೆರದಿ ಮಗುವ ತಂದು ಕೊಟ್ಟ ನಾಯನಪ್ಪಿ ಬೆನ್ನ
ತಟ್ಟಿದವರದಾರೊ? ಕಟ್ಟಿ ಹೊಡೆದ ಕುರುಡರಿಂಗೆ ಕಣ್ಣ

ಕೊಟ್ಟು, ಸೇವೆಗೊಂದು ಮೇಲುಮಟ್ಟವಿಟ್ಟ ಗುಣವ ಮನದ
ತೊಟ್ಟಿಲಲ್ಲಿ ತೂಗಿ ಹಾಡದಿರುವರಾರೊ? ಕೊಬ್ಬಿ ಬೆಳೆದ
ಮಲ್ಲರೆಲ್ಲ ಸೊಂಟದಲ್ಲಿ ಕೈಯನಿಟ್ಟು ಕಣ್ಣ ಬಿಟ್ಟು
ಹಲ್ಲ ಕಿರಿಯುವಾಗ, ಬೆಂಕಿಯಲ್ಲಿ ಬೇಟೆಯಾಡಿ ಗೆಲವ
ತಂದ ಪಶುವಿನೊಂದು ಶೌರ್ಯಕಾರೊ ಮೆಚ್ಚದಿಹರು? ಬೆರಳ-
ನಾರೊ ಕಚ್ಚದಿಹರು? ಮನುಜರೆಂಬ ಹೆಮ್ಮೆ ಮುಚ್ಚದಿಹರು?
ಬೀಡು ಬೂದಿಯಾಯ್ತು, ಎದೆಯ ಕಾಡದೆಲ್ಲ ಹೊತ್ತಿ ಹೋಯ್ತು;
ತಾನು ಜೀವಹಿಂಡಿದೊಂದು ನಾಯಿ ತನಗೆ ಜೀವಮಣಿಯ
ದಾನಮಾಡೆ ದೀನನಾದನಾಳ್ವ; ತನ್ನ ಪಶುತೆಗಾಗಿ
ಬೇಯುತೆಂದ:—"ಚಂದು! ನೀನು ನಾಯಿಯಲ್ಲ, ದೇವಲೋಕ-
ಭೋಗಿ! ಆವ ಜನ್ಮದೇನೊ ಪಾಪಲೇಶಕಾಗಿ ಶಾಪ-
ಭಾಗಿಯಾದೆ! ಬವಣೆಗೊಳಿಸಿದುದಕೆ ನಿನ್ನ ಬಂಡಿಯೆಳೆವ
ಹೋರಿಯಾಗಿ ಹುಟ್ಟದಿಹೆನೆ? ಪಾದರಕ್ಷೆಯಾಗದಿಹೆನೆ?
ಆದರಘವು ಮುಗಿಯಲುಂಟೆ? ನಿನ್ನ ಮನೆಯ ಮೆಟ್ಟಿಲಾಗಿ
ನೂರುವರ್ಷವಿದ್ದರೇನು, ಪಡೆದ ಋಣವ ಸಲಿಸಲುಂಟೆ?
ಬಾರೊ, ಚಂದು! ನಿನ್ನ ಮೂಲದಾಳು ಗುಮ್ಮಣಾಳ್ವನಿಂದು!
ಹೀನನೆಂದು ತೊಲಗಬೇಡ! ಬಾರೊ, ಬಾರೊ!" ಎಂದು ತನ್ನ
ತೋಳನಗಲಿಸುತ್ತ ಮುಂದೆ ಸಾರಿ ತಬ್ಬಿಕೊಂಡನದೆಗೆ;
ಮೀರಿ ಹರಿವ ಬಾಷ್ಪದಲ್ಲಿ ತೋಯಿಸಿದನು ಮೈಯನೆಲ್ಲ.
ತಮವ ಕಳೆದು ರವಿಯ ಕಾಂಬ ಕುತುಕದಿಂದ ರಾತ್ರಿ ಮೊಗದಿ
ಬೆಳಗ ತಳೆದು ಬೇಗ ಬೇಗ ನಡೆಯಿತಾಗ; ಕೆಂಡವಾಗಿ
ನಭಕೆ ನೆಗೆದು ಸುಡುವ ಕಿರಣಗಳನು ಸುರಿದ ಸೂರ್ಯ. ಇಂತು
ತೊಡಗೆ ಲೋಕಲೀಲೆ, ಗುಮ್ಮಣಾಳ್ವ ನಾಯ್ಗೆ ಕಂಪಿನೆಣ್ಣೆ-
ತರಿಸಿ ತಾನೆ ತೊಡೆದು ಮುಟ್ಟಿ ಮೀಯಿಸಿದನು; ರಕ್ತಚಂದ-
ನವನು ಗಾಯಗಳಿಗೆ ಲೇಪಿಸಿದನು; ಬಳಿಕ ಮುದ್ದು ಮಗಳ
ಕೊರಳ ಮುತ್ತಿನೆಕ್ಕಸರವ ತೆಗೆದು ಚಂಡುಗಿಕ್ಕಿ, ತನ್ನ

ಅರಸಿ ತಾನೆ ಕರೆದ ನೊರೆಯ ಹಾಲ ಕುಡಿಸಿ, ಮಡಿಲ ಮೇಲೆ
ಮಲಗಿಸುತ್ತ ಮೈಯ ಸವರಿ, ದಯೆಯ ಸುಖದ ಮೊದಲ ತುತ್ತ
ಸವಿದು. ತನ್ನ ಪಾಪಕಾಗಿ ಕುದಿವ ಮನವ ಕಣ್ಣಿನಲ್ಲಿ
ಮೊಗೆದು ಮೊಗೆದು ಚೆಲ್ಲಿ ನುಡಿದ ಕೊರಳು ಕುಗ್ಗಿ ನುಡಿಗಳುಗ್ಗಿ:—
"ಎನ್ನ ಧನಿಯೆ! ನಿನ್ನ ಧನಿಯ ಮಾತು ಸತ್ಯವಾಯ್ತು; ಎನ್ನ
ಸಾಲ ಬಡ್ಡಿಗೂಡಿ ಪೂರ್ಣ ಬಂದುಹೋಯ್ತು. ಹೊನ್ನಿನಾಸೆ,
ಪಂತ ಮೇಲೆ ನೆಗೆಯಿಪಾಸೆ, ಕೊಂದು ತಿಂಬ ವೇಳೆಯಲ್ಲಿ
ಧರ್ಮರಾಯನವನ ಜುಟ್ಟು ಹಿಡಿದು ತಂದೆನೆಂದು ತಂದೆ
ನಿನ್ನ; ಕಾಮಧೇನುವಿಂದಲೆಳೆಯು ಕರುವ ಬಿಡಿಸಿ ನಾಕ-
ದಿಂದ ನರಕಕೆಳೆದು ತಂದ ತೆರದಿ ತಂದೆ, ಕಷ್ಟಕೊಟ್ಟೆ.
ಮದದಿ ಮುಚ್ಚಿದೆನ್ನ ಕಣ್ಣರೆಪ್ಪೆ ಸುಟ್ಟು ತೆರಯಿತೀಗ;
ತಿಳಿಯಬಲ್ಲೆನೀಗ ನಿನ್ನ ಕಳೆದುಕೊಂಡ ಪುತ್ರಹೀನ-
ನೆದೆಯ ಹುಣ್ಣಿನುರಿಯ. ಅವನ ನೆಳಲ ಹಂದರಲ್ಲಿ, ಇಲ್ಲಿ
ಪಡೆದ ತಾಪಗಳನು ಮರೆದು, ನಲಿದು ಬಾಳು ಪುಣ್ಯಜೀವಿ!
ಸುಖದಿ ಹೋಗು, ಕುಣಿದು ಕುಣಿದು ನಡೆದು ಹೋಗು! ನಿನ್ನ ಹಿಂದೆ
ಬರುವ ಬಯಕೆಯುಕ್ಕಿಯುಕ್ಕಿ ಬರುವುದಾದರೇನು? ಸುಟ್ಟ
ಮೊಗವ ತೋರಲಾರೆನವಗೆ! ಒಂಟಿಯಾಗಿ ಹೋಗು, ಬೆನ್ನ-
ನಂಟಲೇಕಿದೊಂದು ಭೂತ ನಿನ್ನನಿನ್ನು? ಕುಲದ ಕುಡಿಯ
ಹೆಣ್ಣುಮಗಳನುಳಿಸಿ ಕೊಟ್ಟ ಚೆನ್ನ! ಹೋಗು, ಎನ್ನ ಎದೆಯ
ಕಲ್ಲ ಕೋಟೆಯೊಡೆದು ಗೆದ್ದ ವೀರ! ಹೋಗು", ಎಂದು ಹಲವು
ಸೊಲ್ಲ ನುಡಿದು ಸನ್ನೆಗೆಯ್ಯೆ,—ಚಂದುವಗಲದಿತ್ತು, ಬಾಲ-
ವೊಂದು ಅಲುಗುತಿತ್ತು. ಕಂಡು ಗುಮ್ಮಣಾಳ್ವ ನಾಯ ಮನದ
ಶಂಕೆಗೆಂದು, ಓಲೆ ಕಂಟ ದೊರೆಯುದಿರಲು, ಉಟ್ಟ ಜರಿಯ
ಬಟ್ಟೆಯನ್ನೆ ಹರಿದು,—"ಬೆಂಕಿ ಮುಕ್ಕುವಾಗ ಮಗಳ ತಂದು
ಕೊಟ್ಟು ಹರಸಿದುದಕೆ ಸೇವೆಯೆಂದು ಅಡವ ಬಿಟ್ಟು ಕಳುಹಿ
ಕೊಟ್ಟೆನೆ"ಂದು, ಮಡದಿ ಕೊರಳ ಸರದ ಕರಡಿಗೆಯಲಿ ತುಂಬಿ-

ಕೊಂಡ ಕಾಡಿಗೆಯಲಿ ಬೆಳ್ಳಿ ಹಲ್ಲಕಡ್ಡಿಯಿಂದ ಬರೆಸು,
ಚೆಂದುಗಿಟ್ಟ ಸರಕೆ ಸುತ್ತಿ, ಬೆನ್ನ ತಟ್ಟಿ—ನಾಲ್ಕು ಹಜ್ಜೆ
ಮುಂದೆ ತೆಗೆದು ಕೊರಳ ಹಿಂದೆ ಕೊಂಕಿಸುತ್ತ ನಿಂತು ನೋಡೆ,
"ಏನು ನಿಂತೆ ಚಂದು? ಅಯ್ಯೊ! ಮೂಢನಾನು ಮರೆತೆ; ಧನಿಯು
ನೇವಳವನು ಕೊಟ್ಟುದಿಲ್ಲ; ಕೊಡುವುದೆಂತೊ? ಸುಟ್ಟು ತಿಂದೆ!
ಈಗಲೇನ ಕೊಡಲಿ ಕಂದ? ಮನ್ನಿಸೆನ್ನನಿದನು ಕೊಂಡು
ಹೋಗೊ!" ಎನುತ ಸೊಂಟದಿಂದ ರನ್ನವಿಟ್ಟ ನೇವಳವನು
ಆಳ್ವ ಕೊಡಲು, ಧನಿಯುದೆಂದೆ ಭಾವಿಸಿತ್ತೊ ಏನೊ! ನೆಗೆದು
ಬಾಯೊಳದನು ಹಿಡಿದುಕೊಂಡು ಕುಣಿಯುತೋಡಿ ಮಾಯವಾಯ್ತು

ದೈವ! ನಿನ್ನ ಮನದ ಮೋಡಿ ಬಹುವಿಚಿತ್ರವಲ್ತೆ! ಒಮ್ಮೆ
ಹೂವಿನಂತೆ ನಗುವೆ, ಒಮ್ಮೆ ಹಾವಿನಂತೆ ಅಗಿವೆ; ಧರ್ಮ-
ಭೀರುವೆಂದು ತೋರಿಸುತ್ತ ದಾರಿಕೊಡುವೆಯೊಮ್ಮೆ, ಒಮ್ಮೆ
ನೀರನಂತೆ ಬಳಿಗೆ ಬಂದು ಚೂರಿಯಿಡುವೆ ಎದೆಯೊಳಕ್ಕೆ!

* * * * *

ಕೊಂಬು ಮುರಿದ ಗಂಡಮೃಗವೊ ಎಂಬ ತೆರದಿ ಸೆಟ್ಟಿಯಿದ್ದ
ಕಂಡಿತೆಲ್ಲ ಕಾಡಿನಂತೆ; ಕೊಂಡ ಕೂಳ ಸುಣ್ಣದಂತೆ.
ಪದ್ಮವತಿಯ ಬಾಯ್ಗೆ ಬೀಗ, ಕಣ್ಗೆ ಮಸುಕು, ಮನಕೆ ಮುಸುಕು;
ಸದ್ದು ಇಲ್ಲ ಗಾಳಿಯಲ್ಲಿ, ಮುದ್ದು ಇಲ್ಲ ಹೂಗಳಲ್ಲಿ;
ಕುಂಕುಮಕ್ಕೆ ಬಣ್ಣವಿಲ್ಲ, ಕನ್ನಡಿಯಲ್ಲಿ ಕಾಂತಿಯಿಲ್ಲ,
ತಂಬುಲಕ್ಕೆ ರಸವೆ ಇಲ್ಲ, ಕಂಕಣಕ್ಕೆ ದನಿಯೆ ಇಲ್ಲ.
ಹಗಲನೆಲ್ಲ ಜಗಲಿಯಲ್ಲೆ, ಇರುಳನೆಲ್ಲ ಕಣ್ಣಿನಲ್ಲೆ
ಕಳೆದರಿಂತು ಮೂರು ದಿವಸ. ಸೆಟ್ಟಿಯೊಮ್ಮೆಯೊಮ್ಮೆ ಮನದ
ಕಟ್ಟು ಸಡಿಲಿಸುವನು,—'ಎಷ್ಟು ಮಂದಿ ಕರ್ಮಭೂಮಿಯಲ್ಲಿ
ಇಷ್ಟಜನವಿಯೋಗದಿಂದ ದುಃಖಿಸುವರೊ! ನಮ್ಮದೊಂದು
ಪುಟ್ಟ ನಾಯಿ ನಾಲ್ಕು ದಿನಕೆ ಮನೆಯಲಿಲ್ಲದಿರಲು ಬೇಸ
ರಿಷ್ಟದೇಕೊ? ತಿಂಗಳಾಗೆ ಬಿಡಿಸೆನೇನು? ಅಗಸೆ ಹೂವಿ-

ನಂತೆ ಬಾಯು ತೆರೆದು ಚಂದು ಮನೆಗೆ ಬಾರದೇನು? ಮಾನ
ಭಂಗವಾಗದಂತೆ ಕಾದ ಬಂಟಗಿಟ್ಟ ಬೆಳ್ಳಿಪಟ್ಟಿ
ಸಿಂಗರಿಸದೆ ಇರುವೆನೇನು?' ಎಂಬ; ಆಳ್ವನುರಿಮುಸುಡಿನ
ಭಂಗಿಯೆದೆಯ ಕಲಕೆ,—'ಅಕಟ! ಚಂದು, ನಿನ್ನ ಕಟುಕಗಿತ್ತು
ಎನ್ನ ಮಾನವುಳಿಸಿಕೊಂಡೆ, ನಂಬಿದವನ ಕೊರಳ ಕೊಂಡೆ!'
ಎಂದು ತನ್ನ ಹಳಿದುಕೊಳ್ವ; ಧರ್ಮದೃಷ್ಟಿ ಬುದ್ಧಿಯಲ್ಲಿ
ಬಿಂಬಿಸಲ್ಕೆ,—'ಬಂಟ! ಪರಹಿತಕ್ಕೆ ತಲೆಯು ಮುಡಿಪನಿಟ್ಟ,
ಧರ್ಮರಥಕೆ ಕೈಯ ಕೊಟ್ಟ, ಮಾನಮಂಟಪಕ್ಕೆ ತನುವ
ಕಂಬನಟ್ಟ ಸೆಟ್ಟಿ ನಿನ್ನ ಗೆಳೆಯನಾಗೆ, ಕಷ್ಟ ನಿನ್ನ
ಬೆನ್ನಬಿಡುವುದೇನು? ತಾಳು! ತಾಳ್ಮೆಯೊಂದೆ ಜಗವ ಗೆಲ್ವ
ಅಂಬು ಬೇಡದಿರುವ ಬಿಲ್ಲು; ಧೈರ್ಯವದಕೆ ಹೆದೆಯು ತೊಗಲು.
ಬಂದ ಸಂಕಟಗಳ ಹರಿದು ತಿಂದು ಬದುಕು! ಬೇಸರನ್ನೆ
ಆಸರಿಂಗೆ ಕುಡಿದು ಬದುಕು! ಬಿಡಿಸಿಕೊಂಬ ವರೆಗೆ ಹಿಂದೆ
ತಿರುಗಿ ನೋಡಬೇಡ, ನಮ್ಮ ನೆನೆಯಬೇಡ; ಆಳ್ವ ನಿನ್ನ
ಕೊಂದರೇನು? ಕದಲಬೇಡ; ತಿಂದರೇನು? ಮಲೆಯಬೇಡ.
ಸತ್ಯಕಾಗಿ ಸಾಯೆ ಕರ್ಮ ಸತ್ತುಹೋಗದೇನು? ಪಶುತೆ
ಹೊತ್ತಿ ಹೋಗದೇನು? ಪುಷ್ಪಕದಲಿ ಮೇಲಕೆತ್ತರೇನು?
ಸತ್ಯಪಂಥ ಮೆರೆಯದೇನು? ನರನಿದೆಂಬ ನಾಯಿದೆಂಬ
ಕೃತ್ರಿಮಗಳು ದೇಹಕಲ್ಲವೇನು?' ಎಂದು ಜಗ್ಗನೇಳ್ವ.

* * * * *

ನಿದ್ದೆಯಿಲ್ಲದಿರುಳ ನೂಕಿ, ಮೂಡ ಕೆಂಪ ಹೊದ್ದೆ ಜೊಂಪು
ಮುದ್ದಿಸಿದ್ದ ಕಣ್ಣ ಸೆಟ್ಟಿ ತೆರೆಯೆ ಕೆಂಕವಾಗಿ—ಭಾನು-
ವೆದ್ದು ಮೇಲೆ ಸುಡುತಲಿದ್ದ. "ಎಚ್ಚರಿಸಲೆ ಇಲ್ಲವೇಕೆ"-
ನುತ್ತ ಸತಿಯು ಗಜರುತೆದ್ದು, ಮನೆಯ ಬಾಗಿಲಲ್ಲಿ ಕಲ್ಲ-
ಸಿಕ್ಕಿದಂತೆ ಕೈಯ ಕಟ್ಟಿ ನಿಂದು—'ಮಾತ ಸಲಿಸುವಲ್ಲಿ
ಪ್ರೈಗು ನೋಡದವಗೆ, ಸಿರಿಯ ದೂಡುವವಗೆ, ನನಗಿದೊಂದು

ಕುನ್ನಿಯಲ್ಲಿ ಮೋಹವೇಕೊ?’ ಎನುತ ಮನದ ಮೋಡದಲ್ಲಿ
ಮಿಂಚ ಹೂಡುತಿದ್ದ. ಬಿಟ್ಟ ಕಣ್ಗೆ ತೋರಿತಾಗ ಶೈಲ-
ದಗ್ರಭಾಗದಿಂದಲುರುಳಿ ದುಮುಕಿ ಬೀಳ್ವ ಬಂಡೆಯಂತೆ!
ಹಾರಿಹೋಯ್ತು ಕಣ್ಣು, ಮಾನ ವಿಷವ ಕೊಂಡು ಮೂರ್ಛಿಸಿತ್ತು!
ರೋಷ ಹೃದಯಕಂದರದಲಿ ಹಸಿದು ಗರ್ಜಿಸಿತ್ತು!—ಚಂದು
ಬಾಲವೆತ್ತಿ ತಾಯ ಬಳಿಗೆ ನೆಗೆದು ಬರುವ ಕರುವಿನಂತೆ
ಕಾಲ ಬಳಿಗೆ ಬಂತೊ, ಕಾಲ-ಯಮನ ಬಳಿಗೆ ಬಂತೊ? ಬರಲು-
ನುಂಗುವಂತೆ ನೋಡಿ, “ಭಂಡ! ಸಾಯದೇಕೆ ಮುಸುಡ ತಂದೆ?
ತಿಂದೆ ಮಾನಧನವ! ಎಂದು ಗುಡುಗಿ, ಹೆಡೆಯ ಹಾವಿನಂತೆ
ತುಂಡದಲ್ಲಿ ತೂಗುತಿರುವ ನೇವಳವನು ಕಂಡು ಚಕಿತ-
ಗೊಂಡು, ನೈಯ ಕೆಂಗಲೆಗಳು ಕಣ್ಣ ಕಲಕೆ ಘೋರಶಂಕೆ-
ಗೊಂಡು, ರಕ್ತವರ್ಣಲಿಪ್ತಚೇಲಖಂಡ ಸಿಡಿವ ಮನಕೆ
ಖಂಡಿತವನು ಕೊಡಲು, “ಸತ್ತ ಸೊಣಗ! ಧನಿಯ ಸುಲಿದು ತಿಂದು
ಬಂದೆ! ಸಾಕಿದೆನ್ನ ಕೊಂದೆ! ಸಂದು ಹೋಗೆ”ನುತ್ತ ನಾಯ
ಕಂಧರದಲಿ ತುಡುಕಿ ಜಗಲಿಗೊತ್ತಿ ಬಲಿದ ಬಲದ ಮುಷ್ಟಿ-
ಯಿಂದ ತಲೆಯನಪ್ಪಳಿಸಲು, ನಂದಿಹೋಯ್ತು ಜೀವ! ಘ್ರಾಣ-
ರಂಧ್ರ ಬಿರಿದು ಗುಳುಗುಳೆಂದು ಸುರಿದ ಮೂರ್ಧರಕ್ತ, ನಿಷ್ಕ-
ಲಂಕಭಕ್ತಿಯಿಂದಲೊಡೆಯನಡಿಯಲಿಟ್ಟಶೋಕಪುಷ್ಪ-
ಪುಂಜವಾಯ್ತು! ಕೊನೆಯದಾಯ್ತು! ಅದರ ಸೇವೆ ಸಂದು ಹೋಯ್ತು!

ಗಜರುದನಿಯ ಸದ್ದು ಕಿವಿಯನೊದೆಯೆ, ಸಂಧಿ ಸಡಿಲಿ ಕಾಲು
ನಡನಡುಗುತ ಹೊರಗೆ ಬಂದ ಸತಿಯ ಕಣ್ಗೆ ಬಿದ್ದುದೊಡೆದ
ಅಮೃತಭಾಂಡ! ಉದುರಿತವಳ ಹರಣದೊಂದು ಖಂಡ! “ಅರೇ”
ಎನುತ ಕೀರುಗುತ್ತುತಿರುವ ರವಕೆ, ಕಾದ ಕಬ್ಬಿಣಕ್ಕೆ
ಮಲೆವ ಮೊಗವನೆತ್ತಿ ಸೆಟ್ಟಿ ನುಡಿದ:—“ನೋಡು! ಹಾಲ ಕುಡಿದ
ಕರಿಯ ಹುಲಿಯ; ಎನ್ನ ಜೀವದೊರತೆಯಲ್ಲಿ ವಿಷವ ಕಾರಿ
ಕೆಡಿಸಿ ಕೊಂದ ಕೊಳೆಯ ಹಾವ; ಎನ್ನ ನುಡಿಯ ಮುಕ್ಕಿ ಸೊಕ್ಕಿ

ನರನ ನೆತ್ತರೀಂಟಿ ಬಂದ 'ಕಲಿ'ಯ ಕೈಯ ಮಸೆದ ಅಸಿಯ.
.......ಕೊಟ್ಟ ನೇವಳವನು ತರುವ ಕೆಟ್ಟ ಬುದ್ಧಿ ಮೀರಿ ಮರುಳು
ಹುಟ್ಟಿತಹುದು, ನೋಡು! ರನ್ನದುಡೆಯನೂಲು ಬಾಯೊಳಿಹುದು.
ಕಚ್ಚಿ ತೆಗೆದುದೆಂದು ಮೈಯ ರಕ್ತಲೇಪ ನುಡಿಯುತಿಹುದು;
ವಸ್ತ್ರಖಂಡ ಹೊಲೆಗೆಲಸಕೆ ಸಾಕ್ಷಿಯಾಗಿ ಜೋಲುತಿಹುದು!
.......ಎನ್ನ ನಾಲಗೆಯನು ಸೀಳ್ದುದೊಂದೆ ಸಾಲದಾಯ್ತೆ ವಿಧಿಗೆ?
ಕುನ್ನಿಯಿಂದ ಕೊಲಿಸಿದಂಥ ಬೇಡನೆನ್ನ ಮಾಡಬೇಕೆ?
ಅಯ್ಯೊ, ಪದ್ಮವತಿಯೆ! ನಮ್ಮ ಜನ್ಮ ಮಣ್ಣ ಕೂಡಿತಲ್ಲ!"
ಎಂದು ಮೊರೆಯನಿಡಲು, ಮಡದಿ ಬಳಿಗೆ ಬಂದು,—"ನಮ್ಮ ಚಂದು
ಕೊಂದು ಬಂದುದೇನು? ನಂಬಲಾರೆ ನಂಬಲಾರೆನಯ್ಯೊ!
ಚಂದು! ನಿನಗೆ ಸಾವ ಕಾಲ ಬಂದು ಬುದ್ಧಿ ತಿರುಗಿತಲ್ಲ!
ಹಿಂದೆ ನೀನು ನುಡಿಯ ಮೀರಿ ಒಂದು ಕೆಲಸ ಮಾಡಲಿಲ್ಲ;
ಇಂದು ಬಂದೆಯೇಕೊ?" ಎಂದು ಬಳಲಿ ಕುಳಿತು—ಸಂದು ಹೋದ
ಭವ್ಯಭಾಗ್ಯಕೆರಗಿ ಒರಗಿ ಕನವರಿಸುವ ನೆನಹಿನಂತೆ,
ಮಂದಮಂದವಾಗಿ ಚಂದುವೊಡಲ ಮುಟ್ಟಿ ಕಂಪಿಸುತಿರೆ
ತನ್ನ ಕೈಯ ಬೆರಳು,—ಕಂಡಳಲ್ಲಿ ಸತ್ಯ ಕೊರಳನಪ್ಪಿ-
ಕೊಂಡು ಮಿಡಿದ ಕಣ್ಣ ನೀರ ಹನಿಯ ಸಾಲಿನಂತೆ ಜೋಲ್ವ
ಸಣ್ಣ ಮುತ್ತಿನೆಳೆಯ; "ಕೊಂದು ಬರುವ ನಾಯ್ಗೆ ಸರವ ತೊಡಿಸಿ
ಸಿಂಗರವನು ಗೈವರುಂಟೆ?" ಎಂದು ಸುಯ್ದು, ಬಿಗಿದ ಹರುಕ
ನೊಂದು ನೊಂದು ಬಿಚ್ಚೆ ನೆಗೆದ ಬರಹ ತೆರೆದ ಕಣ್ಣ ಚುಚ್ಚೆ,
"ಕಂಡಿರೇನೊ? ನೋಡಿ! ನೋಡಿರೆ"ಂದು ಕೂಗೆ, ನಡುಗಿ ಸೆಟ್ಟಿ
ಕೈಯೊಳದನು ಕೊಂಡ! ತನ್ನ ಹಣೆಯ ಬರಹಗಳನು ಕಂಡ!!
ಗಿರ್ರನಾಗೆ ಮಸ್ತಕಾಗ್ರ, ಉಸಿರು ಅಳ್ಳೆಗಾಗೆ ಅಸ್ತ್ರ,
ಕಲ್ಲ ಕೊರೆವ ನರಳುದನಿಯು ಬಿಗಿದ ಕೊರಳ ಬಿರಿದು ಹೊರಡೆ,
—ಹುಲ್ಲ ಹೊದೆದ ಗರ್ತದಲ್ಲಿ ಕುಸುಕಿ ಬೀಳುವಾನೆಯಂತೆ,—
ನಿಲ್ಲಲಾರದುದುರಿದನು ನೆಲಕ್ಕೆ, ಚಂದುವಿನ ಕೆಲಕ್ಕೆ.

ಬೀಡುಮನೆಯು ಸುಟ್ಟ ಬೆಂಕಿ ತನ್ನ ಬಸಿರ ಕುಂಡದಲ್ಲಿ
ಹಾರಿ ಬಂದು ಬೀಳೆ, ತಾನೆ ಕಡಿದ ಧರ್ಮತರುವದಕ್ಕೆ
ಸೌದೆಯಾಗೆ, ಕೊಂದ ನಾಯ ದಿವ್ಯಗುಣವೆ ಹವ್ಯವಾಗೆ,
ಆಗಳೊಂದನಂತಶೋಕಯಾಗದೀಕ್ಷೆಗೊಂಡ ಸೆಟ್ಟಿ.

ಕಣ್ಣ ಮುಂದೆ ಮಲಗಿರುವುದು ಪುಣ್ಯದೇಹ; ತನ್ನ ಸತ್ಯ-
ವನ್ನು ನುಡಿಯೆ ಬಾರದಿರುವ ಬರಡುನಾಲಗೆಯನು ಕಚ್ಚಿ
ಖಂಡಿಸುತ್ತಲಿಹುದು ಕಿಸಿದ ವಕ್ತ್ರ; 'ಧನಿಯೆ! ನಿನ್ನ ಕೈಯೊ-
ಳುಂಡ ಹಾಲನೆಲ್ಲವಿದಕೊ ಕೊಂಡು ಹೋಗೆ'ನುತ್ತ ತೆತ್ತ
ಗಂಡುತನವ ತೋರುವಂತೆ ತೋರುತಿಹುದು ಸುರಿದ ರಕ್ತ.
ನೋಡಲಾರ! ನೋಡದಿರುವನೆಂತೊ? ಮಾತನಾಡಲಾರ!
ಆಡದಿರುವನೆಂತೊ? ಪುತ್ರನಿರ್ವಿಶೇಷವಾಗಿ ಸಾಕಿ
ಸಾಯೆ ಬಡಿದ ಕೈಗೆ ಸೋಂಕಲಹುದೆ? ಸೋಂಕದಿರುವುದೆಂತೊ?
ನಾಯ ಗುಣವನೆಣಿಸಲದರ ರೋಮವೊಂದಕೊಂದು ಸೂಜಿ-
ಯಾಗಿ ಬಂದು ತಿವಿಯದಿರುವುದೆಂತೊ? ನೆನೆಯದಿರುವುದೆಂತೊ?

"ಕತ್ತಲೆಯಲಿ ಕಾಣದಿರಲು ಮುನಿದು ಕಣ್ಣ ಕಿತ್ತುಕೊಂಡ,
ಸ್ವಪ್ನದಲ್ಲಿ ಹಗೆಯ ಕಂಡು ಅಪ್ಪಿದವಳನೊತ್ತಿಕೊಂದ
ಹುಚ್ಚನಾದೆ, ತುಚ್ಛನಾದೆ! ಸತ್ಯಸುರಭಿ ಕೆಚ್ಚಲೂಡೆ
ಕಚ್ಚಿ ತಿಂದೆ! ಧರ್ಮಕಲ್ಪಲತೆಯ ತಾಯಿಬೇರನಗಿದೆ!
...ಆರೊ ಚಂದು ನೀನು? ನಾಯೊಳಿಂಥ ಮಹಿಮೆ ಕಂಡುದುಂಟೆ?
ಮೂರೆ ದಿವಸದಲ್ಲಿ ಗುಮ್ಮಣಾಳ್ವನೆಂಬ ರಕ್ಕಸನನು
ದೇವನಾಗಿ ಮಾಡಿ ಬಂದೆ! ಬಿರುದುಬಾವಲಿಗಳ ತಂದೆ!
ಆದರೇನೊ ಮಗನೆ! ಮೂರು ವರ್ಷ ನಿನ್ನ ಸಂಗದಲ್ಲಿ
ಬಾಳಿದೆನಗೆ ಬಾರದಾಯ್ತು ಬುದ್ಧಿಯೆನಲದೆನ್ನ ಸಹಜ-
ಭಾವವೆಷ್ಟು ಹೀನವೋ! ಅಘಾದಿಯೆಷ್ಟಗಾಧವೋ! ಕ-
ಠೋರದೈವಕಾದೆನಲ್ಲ ಕೈಯ ಕವಣೆಗೊಂದು ಕಲ್ಲು!
.....ಮನುಜನೆಂಬ ಹೆಮ್ಮೆಯೇರಿ, ಒಡೆಯನೆಂಬ ದುಡುಕು ಮಿಾರಿ,

ನಡತೆ ಹೆತ್ತ ಮುದ್ದುಮಗನ ತುಡುಕಿ ಹೊಯ್ದು ಕೈಗಳಿವನು
ಬಿಗಿದು ಕಲ್ಲಗಾಣದಲ್ಲಿ ನುರಿಯಿರಿದಕೊ, ನರಕದವರೆ!
ತಡೆಯದಿಲ್ಲಿ ಬನ್ನಿರೆನ್ನ ಭಾವಿಬಂಧುಗಳಿರ! ನಿಮಗೆ
ಕುಡಿಸಲೆಂದು ಕುದಿಯುತಲಿದೆ ಹೃದಯಘಟದ ರಕ್ತ, ಕವಳ-
ಗೊಳಿಸಲೆಂದು ತವಕಿಸುತ್ತ ಮಿಡಿಯುತಲಿದೆ ಕರುಳ ಮೊತ್ತ.
.....ಬಾರೊ ಬಂಟ! ಒಂದು ಬಾರಿ, ಕೃಪೆಯ ತೋರೊ! ತೆಗಲೆಯೇರಿ
ಹೀರೊ ನಿನ್ನ ಕೊಂದ ಕೊಬ್ಬ; ನೋಡಿ ನೋಡುತಪ್ಪುತುಬ್ಬಿ
ಹಾರಲೆನ್ನ ಜೀವ! ಬಳಿಕ ಸಾರೊ ನೀನು ಸೂರೆಗೊಂಡ
ವೀರಧಾಮವನ್ನೆ; ತಡೆವುದಿಲ್ಲ, ಕಂದ! ಬಡಿವುದಿಲ್ಲ!"
ಗಾಳಿ ತರಗೆಲೆಗಳ ತೂರಿ ಹಾರಿಸುತ್ತಲೂರಲೆಲ್ಲ
ರೋದಿಸುತ್ತಲಿತ್ತು. ಚಂದು ಕಿಚ್ಚ ಗೆದ್ದಿತೆಂಬ ಮಿಂಚು
ಬೀಸುತಿತ್ತು; ಒಡನೆ ದುಃಖವಾರ್ತೆ ಗುಡುಗಿ ನಡುಗಿಸಿತ್ತು;
ಕೇಳಿ ಊರ ಜನವೆ ಮರುಗಿ ಸೆಟ್ಟಿಯೆಡೆಗೆ ಧಾವಿಸಿತ್ತು.
ನೋಡಿದತ್ತ ಕತ್ತಲನ್ನೆ ಕಾಣುತಿದ್ದ ಸೆಟ್ಟಿಗಾಗ
ಶೋಕದಗ್ಧವಾಗಿ ಬರುವ ಮಂದಿಯೆಲ್ಲ ಕೊಳ್ಳಿದೆವ್ವ-
ದಾಟದಂತೆ ತೋರುತಿತ್ತು. ಆದರಲ್ಲಿ ತಾಪಯೋಗ-
ದೇರುಗದ್ದುಗೆಯ ಮಹಾಸಮಾಧಿಯಲ್ಲಿರಲ್ಕೆ ಸೆಟ್ಟಿ,
ಮೌನಭಂಗವೆಸಗೆ ಧಾರ್ಷ್ಟ್ಯವಾರಿಗೆಂತು ಬಹುದೊ? ದುಃಖ
ದೋಷವಾವರಿಸಿದ ಮೊಗವ ನೋಡಿ ಮಾನಿನಿಯನು ಲಜ್ಜೆ-
ಗೀಡುಮಾಳ್ಪ ಖೋಡಿಯಾವನಹನೊ? ತಮ್ಮ ಹಳ್ಳಿಯೂರ
ತಾಯಿಯಲ್ಲಿ, ತಂದೆಯಲ್ಲಿ, ತಪ್ಪ ಹೆಕ್ಕಿ ನುಡಿವನಿಹನೊ?
ನೋಡಲೇಕೊ ಚಂದುವಿರವ? ನೀತಿನಿರ್ಮಲಾಂಬುವಿನಲಿ
ಬಾಳೆಯಂತೆ ಹೊಳೆಯುತಿದ್ದ ಸೆಟ್ಟಿಯೆದೆಯ ಹಿಂಸೆಯೆಂಬ
ಗಾಳದಲ್ಲಿ ಸಿಲುಕಿ ನೆಲಕೆ ಬೀಸೆ ಬಿದ್ದ ತೆರದಲಿಹುದ!
ಕಂಡು ಕಣ್ಣ ಮುಚ್ಚಿ, ಜಗವ ಮುಂದಲೆಯಲಿ ಹಿಡಿದು ಕುಣಿವ
ಚಂಡವಿಧಿಗೆ ಬೆಚ್ಚಿ, ಮೊಗವ ತಿರುಹಿ, ಮೋರೆಮೋರೆ ನೋಡಿ-

ಕೊಂಡು, ತಮ್ಮ ಮನದ ನೆಳಲನನ್ಯಮುಖಕೆ ಕೊಟ್ಟುಕೊಂಡು,
ಮೆಲ್ಲಮೆಲ್ಲನಡಿಯನೆತ್ತಿ, ಬಂದ ನೆರವಿ ಬಿರಿಯಿತೆಲ್ಲ.
ಅನಿತರಲ್ಲಿ ಗುಮ್ಮಣ್ಣನಿತ್ತ ಹಲವ ಹಂಬಲಿಸುತ
ಮಸಣದಂತೆ ತೋರುತಿದ್ದ ಮನೆಯ ಬೂದಿಗೆದರಿ, ಸುಟ್ಟ
ಸಿರಿಯ ಶೇಷಗಳನು ಉರಿವ ಬಿಸಿಲಿನಲ್ಲಿ ಹೆಕ್ಕುತಿರಲು,–
ಮನದ ಬೇಗೆಯಿಮ್ಮಡಿಸಿತು, ತನ್ನ ಹಲವು ಕಿಡುಗೆಲಸದ
ನೆನಹಿನೊಂದು ನಂಜು ನಾಲ್ಮಡಿಸಿತು; ಬಳಿಕ—ಮಾನಮುಚ್ಚ-
ಲೆನುತ ಮುಸುಡನಡಗಿಸಿದುದರಿಂದ, ಪಡೆದ ತಾಯ ತೆರದ
ಬಡವು ಚಂದು ಮಡಿದುಹೋಯಿತೆನುತ ಸಿಡಿದ ಸುದ್ದಿ ಕಿವಿಯ
ನೊಡೆದು ಹೊಕ್ಕು, ಚುರುಚುರೆನುತ ಎದೆಯ ಹೀರಿ, ಕಣ್ಣುಗಳನು
ಗರಗರೆನುತ ತಿರುಗಿಸಿತ್ತು, ಕೆಡೆಯಿಸಿತ್ತು; ತನ್ನ ಬಂಧು-
ಬಳಗವೆಲ್ಲ ರೋದಿಸಿತ್ತು; ಬಳಿಕ ಎಚ್ಚರಾಗಲೆದ್ದು—
"ಮನೆಯ ತಿಂದ ಮೃತ್ಯುವೆನ್ನ ಅಗಿದು ನುಂಗದುಗುಳಿತಲ್ಲ!
ಅದುವೆ ಹೇಸಿದೊಡಲ ತೊಳೆವ ಕರುಣೆ ಬೇರದಾರಿಗಿಹುದೊ?
ನಡೆವೆ, ಸೆಟ್ಟಿಯಡಿಗೆ ಬೀಳ್ವೆ; ಅವನ ನಾಯಿಯಾಗಿ ಬಾಳ್ವೆ."
ಎನುತದೆಂತೊ ಬಂದ; ಶೋಕತೀರ್ಥದಲ್ಲಿ ಮುಳುಗಿಮಿಂದ!

* * * * *

ಜ್ಞಾತಿವಧೆಯ ದೋಷಭಯ ವಿವೇಕವನ್ನು ಕೆಡಿಸಲೆಂದು
ದೇಶದೇಶಗಳನೆ ಗೆದ್ದು ತನಗೆ ತಂದ ಕುದುರೆಯೊಂದ
ದ್ವಾಪರದಲಿ ಧರ್ಮರಾಯ 'ಧರ್ಮ! ಧರ್ಮ' ಎಂದು ಕೊಂದ-
ನಾದರೆರಡು ಕಣ್ಣನೀರ ಹನಿಯು ಕೂಡ ಅದಕೆ ದೊರೆವ
ಯೋಗವಿತ್ತೆ? ಮಾತು, ನೀತಿ, ಮೊಸಲಳಿದುವೆಂಬ ಶಂಕೆ
ಬಾಧಿಸಲ್ಕೆ ಸೆಟ್ಟಿ ಕೊಟ್ಟ ಬಲಿಯದಾಗಿ ಹೋಯ್ತು ಚಂದು.
ಆದರೇನು? ಕೊಂದ ಕೊಲ್ಲದೆಲ್ಲ ಮಂದಿ, ಹಿಮಗಿರಿಯಲಿ
ಜಾರಿ ಬೀಳ್ವನಂತವಾರಿಧಾರೆಯಂತೆ ಸುರಿದಖಂಡ-
ಶೋಕಧಾರೆ ಯಜ್ಞಪಶುಗಳಗ್ರಪಟ್ಟಗಟ್ಟಿತಲ್ತೆ!

ನಾಯುದೆಂಬ ಮಾತ ಮುಚ್ಚು! ನರರ ಹೆಕ್ಕಳಿಕೆಯ ಕೊಚ್ಚು,
ರಾಗರೋಷಗಳನು ಹಿಡಿವ ಬಲ್ಮೆಗಳನು ಒರೆಗೆ ಹಚ್ಚು.

* * * * *

ಬಂದು ಹೋದ ಮಂದಿ ಹೊತ್ತ ದುಗುಡವೆಂಬ ಹೊರೆಗೆ ಸಂಕ-
ವೆಂದು ಸುಯ್ದ ಸುಯ್ಯೆ ಸುಳಿಯುತಿಹುದ; ತನ್ನ ಕೊಂದ ಕೊಲೆಗೆ
ನೊಂದು ಬೆಂದ ಸೆಟ್ಟಿಯೆದೆಯು ಬಾತುಹೋಗಿ, ಲೋಹದೊಂದು
ಗುಂಡ ಕಾಸಿ ಬಡಿವ ತೆರದಿ ಬಡಿಯುತಿಹುದ; "ಚಂದು, ಚಂದು!"
ಎಂದು ಕರಗಿ ಕಣ್ಣನೀರ ಗಿಂಡಿಯಾದ ಪದ್ಮವತಿಯ
ದುಂಡುಮೊಗವ; ಜಗಲಿಯಡ್ಡ ಕಂಡಿಯಲ್ಲಿ ಕೊನೆಯ ತೂರಿ
ಒಂದೆ ಒಂದೆ ಉದುರಿ ಬಿದ್ದು ಕಂದಿಹೋಗುತಿರುವ ಹೂವಿ-
ನೊಂದು ಪಾರಿಜಾತಗಿಡವ,— ಕಂಡು ಮನೆಗೆ ಕತ್ತಲಾಯ್ತು!

* * * * *

ಗ್ರಹಣಗೊಂಡು ಮುಳುಗುತಿರುವ ಶಶಿಯ ತೆರದಿ— ಚಂದುವೊಡಲ-
ನೆದೆಯೊಳಪ್ಪಿ ಕಾಣುತಿದ್ದ ಬಳಿಯ ಬೋಳುಗುಡ್ಡದೊಂದು
ಹೊಡೆಯಲಿದ್ದ ಸೆಟ್ಟಿ. ಅಲ್ಲೆ ಮಡಗಿ ತನ್ನ ಜೀವನಿಧಿಯ;
ಬಳಿಕ ಕಲ್ಲ ಕಡಿದು ಕೆತ್ತಿ ಕಟ್ಟಿಸಿದನು— ತನ್ನ ಕಣ್ಣ
ಕೆರೆಗೆ ಕಟ್ಟೆಯಂತೆ— ಕಿರುಸಮಾಧಿಯೊಂದನಲ್ಲಿ; ಬಳಿಯೆ
ತನಗೆ ಮಲಗಲಿರುವ ನೆಲವ ಗುರುತಿಸಿದನು. ದಿನದಿನದಲಿ
ಬೆಳಗುಜಾವದಲ್ಲಿ ಬಂದು ಇರುಳ ಶೋಕಸಂಚಯುವನು
ಸುರಿಯುತಿಹನು; ತಂದ ನಾಲ್ಕು ಉದಿರುಹೂವನಿಟ್ಟು, ಹಿಂದೆ
ತಿರುಗಿ-ತಿರುಗಿ ನಿಂದು-ನಿಂದು ನೋಡಿ-ನೋಡಿ ತೆರಳುತಿಹನು.
ಸಂಜೆಯಲ್ಲಿ ಸಣ್ಣ ಹಣತೆಯೊಂದ ಕೊಂಡು, ಸುಳಿವ ಮಿಂಬು-
ಳೆಂಬ ತೆರದಿ ಗುಡ್ಡವೇರಿ, ವಿಧಿಯ ಶಾಪದಿಂದ ಕಲ್ಲ
ಕೊಂಪೆಯಾದ ತನ್ನ ಪುಣ್ಯರಾಶಿಯೆಡೆಗೆ ಬಂದು, ನಿಂದು,
ತಂದ ಜ್ಯೋತಿಯೊಪ್ಪಿಸುವನು.— ಕಂದಿಕಂದಿ ಕರಿಕುವದರ
ಮಂದಕಾಂತಿಯೊಡನೆ ಜೀವ ಕುಂದಿಕುಂದಿ ಬಂತು; ಆಯು
ಬಿಂದುಬಿಂದುವಾಗಿ ಗಲಿತವಾಯ್ತು, ಶೂನ್ಯಲೀನವಾಯ್ತು!

ಕೃಷ್ಣಾಕುಮಾರಿ

ಕೃಷ್ಣಾಕುಮಾರಿ

— ಭಾಮಿನೀಷಟ್ಪದಿ —

೧

ಮೊಳೆದು ಮೊನೆಗಂಡಾಗಿ, ಕಳದಲಿ
ಬಳೆದು ಚಲಗಂಡಾಗಿ, ಸಮರವ
ಕುಡಿದು ಮುಳಿಗಂಡಾಗಿ, ಕಾಲನ ದವಡೆಯನು ನುರ್ಗಿ
ಸೆಳೆದು ಕೆನ್ನಾಲಗೆಯನದರಲಿ
ಮಲಗಿ ಮಲೆದರದಾರು, ಮರುಭೂ-
ಮಿಯಲಿ ಜೀವನ ಬಿತ್ತಿ ಗಂಡಿನ ಸಿರಿಯ ಬೆಳಸಿದರೋ—

೨

ಅವರ ಬಸಿರಲಿ ಹೇಡಿ 'ಸಿಂಗ'ನೆ?
ಅಮರನಂದನದಲಿ ಪಲಾಂಡುವೆ?
ಸುರಪತಿಯ ಮೀಸೆಗೆ ನರೆಯೆ? ದಿಗ್ಗಜಕೆ ಕುರಿಗೂಸೆ?
ಹರಿದನೇ ರಾಣೇಂದ್ರವಂಶದ
ಧವಲಮೌಕ್ತಿಕಸರವ! ಹೆಸರಿನ
ಹೆರೆಯನಗಿದನೆ! ಪೌರುಷದ ಮಣಿಯನು ಬಿಸಾಡಿದನೆ!

೩

ಮಗಳ ಕರಕಮಲಕ್ಕೆ ಹಾರುವ
ಅಳಿಯೆದೆಯ ದುರುದುಂಬಿಗೊಬ್ಬಿನ
ನೊರಜುಗಳ ನುಗ್ಗೊರಸಲಾರದೆ, ನೆಲಕೆ ಹೊರೆಯಾದ
ಶಿರವ ಮರಗೈಯಲ್ಲಿ ಮಲಗಿಸಿ
ಮಲಗಿರಲು,—ಲಲಿತಾರುಣಾಂಬರೆ,
ಅಪರಸಂಧ್ಯಾದೇವಿಯಂತಿರೆ, ಬಂದಳರಗುವರಿ.

೪

ಮೊಗಕೆ ಕತ್ತಲೆಯಾಯ್ತು; ನಯನದ
ಹೊಲಬು ಮಾಸಿತು; ಮನದ ಹೊದರಲಿ
ತಲೆಯ ಮುರಸುತ ಸುರುಳಿತಬಲಃಘಾತಿ ದುರ್ಬುದ್ಧಿ;—
"ಮಗಳೆ, ಮಗಳೇ!" ಎನುತ ಮುಂದಿನ
ನುಡಿಯನರಿಯದೆ, ಕೊಲೆಯ ಕೊಂಡಾ-
ಟದಲಿ ಹಿಡಿವಂತಪ್ಪಿದನು ಕೃಷ್ಣಾಕುಮಾರಿಯನು.

೫

"ತಂದೆ ನಿನಗೇಕಿಂದು ಕಳವಳ?
ಬಂದುದೇನು ವಿಪತ್ತು? ಧೈರ್ಯದ
ಸಂದು ಕಡಿದಂತಿದೆಯಲಾ!" ಎನೆ, ತಡೆದು ಗದಗದಿಸಿ—
"ನೊಂದಿಹೆನು, ಮಾತಾಡಲೇಂ! ನಿ-
ನ್ನಿಂದ ಮೇವಾಡಕ್ಕೆ ವಿಲಯವೆ?
ಕಂದ! ಬರುತಿದೆ ಸಕಲರಾಜಸ್ಥಾನನೃಪಸೇನೆ!

೬

"ತನತನಗೆ ಕೊಡು ಕೊಡು ಎನುತ ಮದ-
ಮುದಿತ ನೃಪಕಲಭಗಳು ಕರವನು
ತುಡುಕುತಿರಲಾಗ್ರೀವನೇನೋ! ಸುತೆ! ನಿನ್ನ ಹೆತ್ತೆನಗೆ
ಗತಿಮತಿಗಳಳಿದುವು; ಮಹಾಹವ-
ಕುದಯಪುರವಸ್ತಮಿಸದೇ? ಸುಂ-
ದರಿ! ವನಾಂತಕೆ ನಡೆವೆನಾದೊಡೆ ನಿನ್ನನೆಲ್ಲಿಡಲಿ?"

೭

ಎನುತ ತಲೆಗುಸಿಯುತ್ತ, ಹರಣದ
ಭಯ ಕೊಳೆದು ನಂಜಾದ ದುರ್ಧರ-
ಹೃದಯದುರ್ಗಂಧವನು ಸೂಸಿದನಿಂತು ನಿರ್ಲಜ್ಜ—:
"ಹೆಣವ ಹುಗಿಯದೆ ಹದ್ದುಗಳ ಹಾ-
ರಿಕೆಯ ತಡೆಯಲಿಕಹುದೆ? ವಿಷವನು
ಕುಡಿದು ಮಡಿ! ಮರುನುಡಿಯದಿರು ಮಗಳಾದೊಡೆನಗೆ"ಂದ.

೮

ಬೆದರಿದಳೆ? ಕೆದರಿದಳೆ? ನಲ್ನುಡಿ
ತನುವ ಪಡೆದಂತುಸಿರಿದಳು—"ನಗು-
ನಗುತ ಮಡಿವುದು ರಾಜಪುತ್ರಿಯನನ್ಯಸೌಭಾಗ್ಯ!
ಮಡಿವೆನಂಜದಿರಾದೊಡೊಂದನು
ನುಡಿವೆ;—ನೀ ಮಗಳೊಡನೆ ಮಾನವ
ಮಡುಹದಿರು; ಕುಲದುರಿಗಳೆದು ಮಸಿಗೆಂಡವಾಗದಿರು!

೯

ಅರಿಯೆಯಾ ಚಿತ್ತೋರದುರ್ಗದ
ಪರಮಪುಣ್ಯಾಹುತಿಯ ಭೂತಿಯ?
ಕುಲದ ದೈವವನೇಕಲಿಂಗನ ನೆನೆನೆನೆದು, ಕೈಯ
ಖಡುಗವರಿರಕ್ತದೊಳಗೀಸಾ-
ಡುತಿರೆ, ಘುಡುಘುಡಿಸುತ ದಿಗಂತದ
ಹೊಡೆಗೆ ಕೀರ್ತಿಯನಪ್ಪಳಿಸಿದ ಪರಾಕ್ರಮಾರ್ಣವರ?

೧೦

ಗಂಡುಗಲಿಗಳು ನಲಿನಲಿದು ರಿಪು-
ರುಂಡಗಳ ಚೆಂಡಾಡೆ,—ಪಂಕಜ-
ಷಂಡದಲಿ ಜಲದೇವಿ ನರ್ತಿಸುವಂತೆ, ಧಗಧಗಿಪ
ಕುಂಡದಲಿ ಕುಣಿಕುಣಿದು ಪುಲಕದ
ತಂಡ ಬೆವರಲಿ ತುಳುಕೆ, ವಿಲಯದ
ತಾಂಡವವ ತುಳಿದಾಡಿ ಪದ್ಮಿನಿಯೆಡೆಗೆ ನಡೆಯುವೆನು!"

೧೧

ಧುರದ ವಾರ್ತೆಗೆ ನಡನಡುಗಿ ನರ-
ನರಿ ಮುಸುಡ ತಿರುಹುತ್ತ ನಡೆದನು;
ಕಳುಹಿದನು ಹಾಲಾಹಲವ ಹೊಸ ಹೊನ್ನ ಬಟ್ಟಲಲಿ!
ಕೊರಗಿದಳು, ವೀರತೆಯ ಬರಗಾ-
ಲದಲಿ ಬಾಡುವ ತುಲಸಿಯೆನೆ! ಕೈ-
ವಿಡಿದಳಿನಿಯನ ಗಲ್ಲವನೆ ಹಿಡಿವಂತೆ ಬಟ್ಟಲನು!

೧೨

ಅಂಬುಜದ ಬಾಯ್ದೆರೆಗೆ ಸಿಡಿಲಿನ
ತುಂಬಿ ಹೊಕ್ಕಿತು! ಪದ್ಮಿನಿಯ ಪದ-
ದಿಂಬನೇ ನೆನೆಯುತ್ತ ನುಂಗಿದ'ಳಕಟ! ಕೊಲಲಾರೆ
ಕಂಬುಕಂಧರೆಯಿವಳನೆ'ಂದಾ
ನಂಜು ಮರಳಿತ್ತೆನಲು, ಹಿಮುದಲಿ-
ತಾಂಬುಜಾನನೆ ಕಾರಿದಳು, ಭೂತಳದಿ ಹೊರಳಿದಳು!

೧೩

ಮರಳಿ ಕುಡಿದಳು, ಮತ್ತೆ ಕಾರಿದ-
ಳಬಲೆ! ಹಾಲಾಹಲಕೆ ಕೈಯೇ
ಮಿಗಿಲೆನಲು ತಂದಿತ್ತ ನವವಿಷರಸವ ಕೈಕೊಂಡು,—
"ಪಡೆದೊಡೆಯ! ಅಕ್ಕಿಸು ವಿಷವ; ನಿ-
ನ್ನಡಿಗೊಡಲನೊಪ್ಪಿಪೆ! 'ಸಿಸೋದಿಯ'-
ಕುಲದ ಪೂರ್ಣಾಹುತಿಯ ಕೈಕೊಳ್ಳೆ"ನುತ ಹೀರಿದಳು!

೧೪

ಬೀತು ಹೋಯಿತು ರಾಜಪುತ್ರರ
ಪೂತ ತೇಜದ ಕೆಂಡಸಂಪಗೆ!
ಘಾತಿಸಿದ ವನಹರಿಣಿಯಂತೆ ಕುಮಾರಿ ಕೆಡೆದಿರಲು,—
ಕಾತರಿಸಿ ಕುರರಿಗಳ ತೆರದಲಿ
ಹಾತೊರೆಯಿತಂತಃಪುರವು! ವಿಷ-
ವಾತವೆನೆ ವಾರ್ತೆಯನು ಸಂದೇಶಿಸಿದನರಿಗಳಿಗೆ.

೧೫

"ರಣಕೆ ಹೆದರಿದ ಹೇಡಿ! ಮಗಳನು
ಮಡುಹಿದಧಮ! ಕುಲೀನವಂಶದ
ಕೊಡಲಿ! ನಿನ್ನನು ಸದೆವೆವೆ"ನುತರಸರು ಸಮೂಹಿಸುತ
ಖಡುಗದೋಲೆಯ ಕಳುಹೆ,—ಹೌಹಾ-
ರುತ, ಕುರುಡು ಕುರಿಯಾಗಿ, ದುರ್ಮಂ-
ತ್ರಿಗಳ ಕುರುಬತನಕ್ಕೆ ಕುಲನೆಲಗಳನು ಮಾರಿದನು!

೧೬

ನರಗೆ ಬಾಗದ ಹಣೆಯು ಬೆಳಗಿದ
ಘನಕಿರೀಟವನಡಿಮುಗುಚಿ 'ಕುಂ-
ಪನಿ'ಯ ಬಾಗಿಲ ಭಿಕ್ಷೆಯೋಡನು ಮಾಡಿ, ಮುದವಡೆದು
ಸವಿದನುಂಬಳಿಯುಂಬಲಿಯ! ಕೈ-
ಮುಗಿದು ಕೊಂಡನು ವೈರಿಭೀತಿ-
ಜ್ವರಕೆ ಹೊದೆಯಲು ಪರರ ಸಾಮಂತಿಕೆಯ ಕಂಬಳಿಯ!

೧೭

ಮೊದಲಡೊಬ್ಬ ಕನೋಜನೃಪ ಮಗ-
ಳೆದೆಗೆ ಶೂಲವನಿಕ್ಕಿ, ಸ್ವಾತಂ-
ತ್ರ್ಯವನು ಘೋರಿಗೆ ಮಾರಿ ಸತ್ತನು; ಮತ್ತೆ ಮರುಹುಟ್ಟಿ
ಪಡೆದು, ಮಗಳನು ತಿಂದು, ಮಾನವ
ಹುಗಿದು, ಬದುಕಲು ಕುಂಪನಿಯ ಬಾ-
ಯುಗುಳ ನುಂಗಿದನವನೆ; ನಿಜ! ಇತರಂಗಿದರಿದರಿದು!!

೧೯೩೯.

ತರುಣ-ಧಮನಿ

ಎಂಬ

ಕಾವ್ಯ ಖಂಡ

ಮುನ್ನುಡಿ

ನುಡಿಯ ದೇವಿ! ನಿನ್ನ ಕಣ್ಣ ಕೊನೆಯ ನೋಟದೆಳೆಯ ಪಡೆದು,
ಮೊದಲ ವರಕವೀಂದ್ರ ತನ್ನ ನುಡಿಯ ಮಾಣಿಕಂಗಳ
ಕೊರಳ ಹಾರವೊಪ್ಪಿಸಿದನು; ನವಕವೀಂದ್ರ ತನ್ನ ಕಣ್ಣ
ಹನಿಯ ಕೋದು ನೂಪುರಗಳ ನಿನ್ನ ಪದಕೆ ತೊಡಿಸಿದ.

ನುಡಿಗೆ ಹೊಳೆತವಿಲ್ಲವೆನ್ನ ಬಗೆಗೆ ಭಾವರಸಗಳಿಲ್ಲ;
ಬದುಕು ನಿನ್ನದಾಗಿರಲ್ಕೆ ತೆರಿಗೆಗೇನಮಾಡಲಿ?
ಎದೆಯ ರಕುತಬಿಂದುಗಳನು ಹನಿಸಿ ಹೆಕ್ಕಿ ಕೊಡುವೆ, ಮನಕೆ
ಬರಲವೊಂದು ಗಳಿಗೆ ನಿನ್ನ ಚೆನ್ನೆಮಣೆಯೊಳಾಡಲಿ.

ಕಾವ್ಯ-ಖಂಡ

೧

ಅಡಗುವ ರಾತ್ರಿಯನೆಬ್ಬಟ್ಟುತ ಮೂ-
ಡಲ ಕೆಂಪೇರುತಿರೆ,
ಹುಲಿಬೇಟೆಗೆ ಹಯವೇರಿದ ವಿದ್ಯಾ-
ನಗರದ ರಾಮುದೊರೆ.

೨

ಹೆಗಲೇರಿರೆ ಹೆದೆಯೇರಿದ ಬಿಲ್ಗೊನೆ
ಮಿಡುಕಿನ ಕುಡಿಯಂತೆ;
ನಡುವಿನೊಳೊಲೆದುದು ನಿಡುಗೂರಸಿ ತಾ-
ರುಣ್ಯದ ಮನದಂತೆ.

೩

ಹಣೆಯಗಲವ ಕೋರೈಸುತ ಬಲಿದುದು
ಸಿರಿಮುಡಿ ಜರಿ ಮಿರುಗೆ,
ತರುಣಮನೋರಥವೀಥಿಯ ಸುಂದರ-
ಸೌಧದ ನೆಲೆಯಂತೆ.

೪

ನೀಳ್ದಿವೆನೆಳಲಲಿ ಮಲೆಗಣ್ ನೀಡಿತು
ವಿಭವದ ಮದದಂತೆ.
ಆಳ್ದ ಮೊಗವ ಮೂಗೊಪ್ಪಿತು ಬಾಗುತ
ಕಲಿತ ವಿನಯದಂತೆ.

೫

ಹೊಳೆವಭಿಮಾನದಿ ತುಂಬಿದ ಗಂಡದಿ
ಗರುವದ ಚಿಗುರಂತೆ
ಕೊನೆಯೇರಿದ ಬಾಯ್; ಬಲಿದ ಚಿಬುಕವನ್ನು-
ರಾಗದ ಮೊದಲಂತೆ.

೬

ಮೊಗಕುಬ್ಬಿದ ಮೈ, ಮೈಗುಬ್ಬಿದ ಕೈ,
ಕೈಗುಬ್ಬಿದ ಕೈದು;
ತೊಡೆಗುಬ್ಬಿದ ಹಯ, ಹಯಕುಬ್ಬಿದ ತೊಡೆ;
ನಡೆಗುಬ್ಬಿತು ವನವೆ.

೭

ಹುಲ್ಲೆಯ ಕಂಡರೆ ಹೊಡೆಯಲು ಬೇಡನೆ?
ಹುಲ್ಲು ಸಿಡಿಲ ಗುರಿಯೆ?
ಕೊಲ್ಲಲು ಹಕ್ಕಿಯ ಮನವದು ಕವಣೆಯ
ಕಲ್ಲೆ? ನಲವೆ, ಹೊಲೆಯೆ?

೮

ವನಕೆ ನುಗ್ಗಿದನು, ವನದಳ್ಳೆದೆಗೊಂ-
ದಲಗು ನುಗ್ಗಿದಂತೆ;
ದೊಣೆಯಿಂದೆಳೆದನು ಬಾಣವ; ಮಿಂಚಿನ
ಮರಿಗಳ ಸೆಳೆದಂತೆ.

೯

ವನವರಾಹಗಳ ದಾಡೆಯ ಮುರಿದನು,
ವೃಕಗಳ ನಾಲಗೆಯ
ತರಿದನು, ಕರಡಿಯ ಮುಸುಡನು ನುರಿದನು;
ಹುಲಿಯನೆ ಹುಡುಕಿದನು.

೧೦

ಕುಟಿಲಗೆ ಕೌಟಿಲ್ಯದ ಕೊರಳುರುಳನು
ಘಟಿಪುದು, ಸಟಿಗನಲಿ
[illegible]ವುದು; ರಾಮಗೆ ಗೆಲವೆಂಬೊಗಟ ವಿ-
ಘಟಿಸುವ ಸೂತ್ರವಿದು.

೧೧

ಕುಹಕವ ನೆನೆದನು, ಕುದುರೆಯನಿಳಿದನು;
ಮಿದುಹಜ್ಜೆಯ ಹಿಡಿದು,
ಹಸಿ ಹುಲ್ಲಿಗೆ ವೈನೀಡಿದ ಹುಲ್ಲೆಯ
ಚಳಕದಿ ತುಡುಕಿದನು;

೧೨

ಕಿವಿಹಿಡಿದೊಯ್ದನು, ತರುವಿನ ಮೂಲಕೆ
ಬಲಿದನು; ಮರವೇರಿ
ಕುಳಿತನು, ಸಿಡಿಲಡಗಿದ ಮುಗಿಲಿನ ಮುರಿ-
ಯಂತಿರೆ ಕೈಕೋವಿ.

೧೩

ಎಣೆಯನು ನೆನೆದೋ, ಮರಿಯನು ಕರೆದೋ,
ಮನುಜನ ಕಲುಮನಕೋ,
ಮರುಗುತ್ತಿದ್ದುದು ಬಿಗಿವಡೆದೆರಳೆಯು
ವನವನೆ ಕೊರೆಕೊರೆದು.

೧೪

ಹರಿಣಿಯ ಮೊರೆ ಹುಲಿ ರಾಯನ ಹರಣವ
ಸೆರೆಗೊಂಡಿತು; ಕಿವಿಯ
ಸೆರೆಯಗಲಿತು, ಮೂಗರಳಿತು; ಹೊರಟಿತು
ಗುಹೆಯುರಳಿತೊ ಎನಲು.

೧೫

ಹುಲಿಯು ಹಾರಯಿಸಿ ಮರದಲಿ ಕುಳಿತಾ
ದೊರೆಯು ಕಣ್ಬೊಲದಲಿ
ಸುಳಿದುವು ದೂರದೊಳರಸಂಚೆಗಳೆನೆ
ಮುಸುಕಿನ ರೂಪೆರಡು.

೧೬

ಚಕಿತ-ಚಕಿತ-ಚಂಚಲ-ವಿಲೋಕನದ
ನಳನಳಿಸುವ ಮೈಯು
ಅಬಲೆಯರೋ? ಭಯರಸದಲಿ ಹೊಂಚುತ
ಹೊಳೆಯುವ ಬಾಳೆಗಳೋ?

೧೭

ಅವರೊಳಗೊಬ್ಬಳು, ಬಿಳಿಯೆರಳೆಯು ಮರಿ
ಹಿರಿಯಳ ತಕ್ಕೆಯಲಿ
ಚೆಲುವೇ ಬಳಲಿ ಬಳುಕಿ ಬಂದಂತಿರೆ,
ಧೃತಿ ಬಳಲಿತು ದೊರೆಯ!

೧೮

ಬೀರದ ಗೂಡಿನ ಬಂದಿ ಮನೋಭವ-
ರಾಜಕೀರನೆದೆಯು
ಬಾಗಿಲ ಮಿದಿಯಿತು ರೆಕ್ಕೆಯನೆತ್ತಿ, ವಿ-
ಹಾರಿಪ ತವಕದಲಿ.

೧೯

ಮದನರಸದ ನವವರ್ಷಬಿಂದುಗಳು
ಹೃದಯಭೂಮಿಗುದುರೆ,
ನೆಗೆದ ಗಂಧಕರಳಿದುದು ವ ಗು ನರ
ವೃಷಭನಿಂದ್ರಿಯಗಳ.

೨೦

ಬೆಣ್ಣೆಯ ಬೊಂಬೆ ನಡೆದು ಬರುವಂತಿರೆ
ಬಿಸಿಲ ಝಳಕೆ ಕರಗಿ,
ತಂಪುಗೊಡುವೆನೆಂದಾಸೆಯ ಕೊಡೆಯನು
ಬಿಚ್ಚಿತು ಮನಸೋಡಿ.

೨೧

ಕೌಮುದಿ ಕರಗಿದ ಮನವದು ರಮಣಿಯ
ರೂಪಿನ ಕರುವಿನಲಿ
ಸೋರಲು ತುಂಬಿ, ತದಾಕಾರದಿ ನೆಲೆ-
ವಡೆಯಿತು ತಣಿತಣಿದು.

೨೨

ಅನಿತರೊಳಾ ಹುಲಿ ಕಣ್ಣಿನ ಕೆಂಡದಿ
ಗಹನದಿ ದಾರಿಯನು
ಬಿಡಿಸುತ ಬಂದುದು, ವನದುಸಿರನೆ ಕೊನೆ-
ಬಾಲದಿ ತೂಗುತಲಿ.

೨೩

ಬರುವವರಿಬ್ಬರ ಕಾಣುತ, ಬಣ್ಣದ
ಮೈಯನು ಬಾಲದಲಿ
ಬಿಗಿದಮುರಿತು ಹೊದರೆಡೆಯಲಿ, ಸಿಡಿಲಿನ
ಮೊಟ್ಟೆಯದೆಂಬಂತೆ.

೨೪

ಮುಗುದೆಯ ಮೈಯಲಿ ಮರೆದೊರಗಿದ ಕ-
ಣ್ಣರಿಯಲಿಲ್ಲ ಹುಲಿಯ
ನೆಲೆಯನು, ತನ್ನಯ ಭವಿತವ್ಯತೆಯಲಿ
ಬಲೆಬೀಸಿದ ವಿಧಿಯ.

೨೫

ದಿಕ್ಕುಗೆಟ್ಟವರು ಬರುತಲಿ ಕಂಡರು
ಹೊದರಲಿ ಸಿಡಿಗುಂಡ!
ದಿಟ್ಟೆ ಹಾರೆ ಚೀರುತ ಕೆಡೆದರು ದೊರೆ-
ಯೇರಿದ ಮರ ನಡುಗೆ.

೨೬

ಘುಡುಘುಡಿಸುತ ನೆಲನೊಡೆದಂತಿರೆ ಧೀಂ-
ಕಿಡುತಾ ಸುಂದರಿಯ
ಎದೆಯುಡರಿತು ಹುಲಿ, ವನಶಾಸನದಂ-
ಡವ, ಬಾಲವ, ನೆಗಹಿ.

೨೭

ಮೀರಿದ ಸಮಯವನರಿದು ಕಠಾರಿಯ
ಕೀಳುತ, ಮರದಿಂದ
ಹಾರಿ ಹುಲಿಯನೊದೆದಾರ್ದರಿದನು ತಲೆ
ಹಾರೆ ನೆತ್ತರೊಡನೆ.

೨೮

ಮರೆದೊರಗಿದ ಸುಂದರಿಯನು ಹಾರುವ
ಎದೆಯಲಿ ದೊರೆಯೆತ್ತಿ,
ಹುಲಿಯುಗುರಿನ ಹಜ್ಜೆಯ, ನಡುಗುವ ಕೊನೆ-
ಬೆರಳಿಂದೆಣಿಸಿದನು.

೨೯

ಗಾಯಗೊಂಡ ಕೋಮಲೆಯನು ಮಡಿಲಲಿ
ಮಲಗಿಸಿ, ನೆತ್ತರಲಿ
ನೋವ ನುಡಿವ ಕುಪ್ಪಸಕಿತ್ತನು ಕ-
ಣ್ಣೀರಲಿ ಮರುನುಡಿಯ.

೩೦

ಆಗಲವಳ ಸಖಿ ಕಣ್ದೆರೆದೆದ್ದಳು,
"ಹಾ ಮಿಹಿರೇ!" ಎಂದು
ಬೀಳುವನಿತರೊಳು ದೊರೆ ನೊಗವೆತ್ತಿ ನಿ-
ವಾರಿಸಿದನು ಭಯುವ.

೩೧

"ಬದುಕಿದೆ, ಬದುಕಿದೆ! ಬೆದರದಿರಬಲೇ!
ಅಮರಕನ್ಯೆಯಿವಳ
ತುಡುಕೆ ಬಂದ ಮೃತ್ಯುವೆ ಮಡಿಯಿತು ಜಗ-
ದೊಡೆಯನೊಲುಮೆಯಿಂದ."

೩೨

ಎನೆ, ಬೆದರಿಕೆ ಬೆರಗಿನ ಸೆರೆಯಾಗಲು,
ನಿಂದಳು ನೋಡುತ್ತ
ದೊರೆಯು ದಯಾರಸದಲಿ ತೇಲುವ, ಮುಗು-
ಳಿದ ಕಂಗಳ ಸಖಿಯು.

೩೩

ವಿನಯದ ಬಲುಹಿಂಗೆ ಬಗ್ಗಿದ ದೊರೆ ಸುಂ-
ದರಿಗೆ ಸಖಿಯು ತೊಡೆಯ
ಮೃದುತರಶಯ್ಯೆಯನೊದವಿಸೆ, ಪುಲಕದ
ನೆರೆನೊರೆ ನಂದಿದುದು.

೩೪

ಸೆರಗಿನ ಗಾಳಿಗೆ ಚಿಗುರಿನ ಗಾಳಿಯು
ನೆರವಾಯಿತು, ನೀರ
ಹನಿಯುನು ನೇಹದ ಹನಿ ಕೂಡಿತು, ಲಲಿ-
ತಾಂಗಿಯು ಸೇವೆಯಲಿ.

೩೫

“ಯುವನಿಯೆ, ನಿನ್ನ ಮೃದುಪದಕೇತಕೆ
ಗಹನದ ಗತಿಯಾಯ್ತೋ!
ಹರಿಯುದ ಬಿಸಿಲಿಗೆ ನೆರಳೀಯಲು ಭಾ-
ಗ್ಯದ ಮರವಿರದಾಯ್ತೋ?

೩೬

ಜೀವಕೆ ಬೆಲೆಯಾದೀ ಗೌರಾಂಗಿಯ-
ದಾರವಳೋ! ನಿಮ್ಮ
ನೇಹದ ನೊರೆಯೆಂತೋ! ಪರಿಚಯರತಿ
ಜೀವಿಗೆ ಸಹಜವಲಾ!”

೩೭

ರಾಮನ ಮೃದುಗಂಭೀರೋಕ್ತಿಗೆ ತಲೆ-
ಬಾಗಿ ಯುವನಿ ತೊಡೆಯ
ಭಾಳೆಯ ಹಣೆಯೊರಸುತ ನುಡಿದಳು ಕ-
ಣ್ಣೀರನುಕಂಪಿಸಲು—:

೩೮

“ಸಿಕ್ಕಿನ ಸಮಯದಿ ಸಿಕ್ಕಿದ ಬಂಧುವೆ,
ಕತ್ತಲೆಯುಲಿ ದೊರೆತ
ದಿಕ್ಕೆ! ನಿನ್ನೊಳೊರೆವೆನು; ಸಂಕೋಚವ
ಮುಕ್ಕದೆ ಸಂಕಟವು?

೩೯

ನೋಡಿದೊಡವೆ ಕಾಣಿಕೆ, ಕರ್ಣಕೆ ರೂ-
ಪೋಡಿದ ಹೆಣ್ಣರಸಿ,
ಬೀಸಿದ ಬಲಗೈ ಬಿಚ್ಚುಗತ್ತಿಯೆನ-
ಲಾಳ್ವನದಿಲಶಹನು.

೪೦

ನೃಪಭಕ್ತಿಯ ಕಾದಿಹ ಸರದಾರರ
ಕೋಟೆಗೆ ಕೊತ್ತಳದ
ತೆರದಾ ಶರಖಾನನ ಸತಿ ಚೆಲುವಿನ
ಸೀಮೆ, ಅಯಶನಾವೆ.

೪೧

ಕುಲಗೌರವ ಗುಣಸಂಪದವೆದೆಯೊಂ-
ದೆರಕ ಧರ್ಮಬುದ್ಧಿ
ಒಡವೆರೆದಯಶೆಯ ತೊಲಗಿತೊ? ಹೆತ್ತಳೊ
ಮಗಳನೀ ಮಿಹಿರೆಯು!

೪೨

ಪ್ರಸವಿಸಿ ಮುತ್ತನು ಶುಕ್ತಿ ಜಘನ್ಯಗೆ
ಸುಲಭವಾಯಿತಯ್ಯೋ!
ಶಹನಳಿಯಾಸೆಯ ಗಾಳಕೆ ಗಂಟಲು
ಸಿಲುಕೆ ಸಂದಳಬಲೆ.

೪೩

'ಹಗೆಯನು ಕೊಯ್ಯಲು ಬದುಕು ಬಿತ್ತೆ'ನುವ
ಬಗೆಯಲಿ ಶರಖಾನ,
ಗೃಹದೀಪಿಕೆಯಿವಳನು ಕೊಂಡೂರನೆ
ತೊರೆದನು, ಧನಿಯೆನ್ನ.

೪೪

ಹಗಲಿರುಳಾದುದು, ಕಾಲವು ಸಂದುದು
ತಲೆಯ ಮುರಿಸಿ ತಿರುಗಿ—
ತಿರುಗಿ; ವಿಜಯನಗರದ ಸೀಮೆಯೊಳಿರೆ,
ವಿಧಿ ಬಿಟ್ಟುದೆ ಬೆನ್ನ?

೬೫

ಅರಳಿದ ಸಂಪಗೆಯನು ಕದ್ದೊಯ್ವುದು
ಸದರವೆ ಸಂತೆಯಲಿ?
ಮಗಳೆರಕವ ಬೇಡಲು ಕೊಡದಿರೆ, ಖೂ-
ಳರು ಕಡಿದರು ಕೊರಳ!

೬೬

ಜನಿಸಿದ ನೊದಲು ತನಗೆ ಕೈಮೈಯಂ-
ತಿರೆ ಬಳಿವಿಡದೆನಗೆ
ಬಡವೆಗಿವಳು ಕರುಣಿಸಿ, ತನ್ನುಗುಳಿದ
ಹರಣವ ನುಂಗಿದಳು.

೬೭

ಹುಡುಕಿ ಹುಡುಕಿ ಹೋದೆಡೆ ಬೆಂಬತ್ತುವ
ಚೆಲುವುಗಳ್ಳರಿಂಗೆ
ಹೆದರಿ ವನವ ಹೊಕ್ಕರೆ, ಹುಲಿಯಾದುದು
ವಿಧಿ, ದೀನದಯಾಲೋ!"

೬೮

ಯುವನಿಯು ನುಡಿಗಳ ಕುದಿವ ಕಥೆಗೆ ಕಿವಿ
ಬಾತು, ಮನಸು ಸೋತು,
ದೊರೆ ದುಗುಡದ ಹೊರೆಯಲಿ, ಹುಂಗುಟ್ಟುತ
ನಡೆದ ಕೃಪಾಪಥವ.

೬೯

ಮಾತಿನ ಮಣಿ ಮುಳುಗಲು, ತಳದೆದೆಯಿಂ-
ದೇಳ್ವ ಮುಗುಳಿಯಂತೆ;—
ಮೋಹದ ತೆರೆಯುಗಲಲು,—ಕಂದೆರೆದಳು
ಮಲಗಿದ ತರಳಾಕ್ಷಿ.

೫೦

ಮಳೆ ಮುಗಿದಿರೆ, ಬಿಸಿಲರಳೆ, ಹೊಸಬನಂ-
ತಿರೆ ಮಾರುತ ಸುಳಿಯೆ,
ಮರದೆಲೆ ಗಳಿಸಿದ ನೀರಂತಿಳಿದುದು
ಕೆಳದಿಯ ನಯನಾಂಬು.

೫೧

ಭಾವದಿ ಮಿಂಚಿನ ಮಾಲೆಯಾಯ್ತು, ಮೊಗ-
ಕಾಯಿತರುಣಿಲಕ್ಷ್ಮಿ,
ರಾಮನ ಕಣ್ಣಿಗೆ ತೇಲಿ ಬರಲು ಮಿಹಿ-
ರೆಯ ವಿಾಸಲ ನೋಟ.

೫೨

ಬಳಲಿಕೆಯಾಗಲಿ, ರುಜೆಯಾಗಲಿ, ಶೋ-
ಕವೊ ಭಂಗವೊ ಇರಲಿ,
ನವವಯಸರ ಮಿಡಿಯೆದೆಯನು ಚಿವುಟುವೆ
ಮದನ, ಹೃದಯಹೀನ!

೫೩

ಮುಳ್ಳೆಲೆಗಳಸೊತ್ತರಿಸುತ ಕೇದಗೆ
ಮೆಲ್ಲನೆ ಬಿರಿವಂತೆ,
ಕನ್ನೆಯು ಕರಕರೆಗಳ ತೊಲಗಿಸುತೆದೆ
ಕಮ್ಮನರಳಿತಾಗ.

೫೪

ಕಣ್ಣ ಕೊನೆಗೆ ಮನ ಹಾರುತ ನೋಟದ
ತಂತಿಯನೆಳೆದೆಳೆದು,
ಹೆಣ್ಣೆದೆಗಿತ್ತುದು ಜೇಂದನಿಗಳ, ಮರು-
ದನಿಗೊಡಲರಸನೆದೆ.

೫೫

"ಸುಂದರಿ, ನೀ ಕಣ್ದೆರೆಯಲು ಲೋಕಕೆ
ಕಣ್ ತೆರೆದಂತಾಯ್ತು;
ನಂದಿದೆಮ್ಮ ಮನಸಿನ ಬತ್ತಿಗೆ ಬೆಳ-
ಗೊಂದಿಸಿದಂತಾಯ್ತು."

೫೬

ಎಂದ ದೊರೆಯ ನುಡಿಗೇಳಿ ಮಿಹಿರೆ ಕರ-
ಣಂಗಳು ನಡುಗುತಿರೆ
ತಾಂಗಿ ಸಖೀಕಂಠವನೆದ್ದಳು ಸಿಂ-
ಗಾರ ಪೊಂಗಿದಂತೆ.

೫೭

"ಹರಣವಿತ್ತ ಕರುಣಾಳುಗೆ ನಮಿಸೆ"ನೆ
ಕೆಳದಿ, ಮುಗುದೆ ತನ್ನ
ಹೃದಯವ ಹಿಡಿದೊಪ್ಪಿಸಿದಂತಿರೆ ಕೈ-
ಮುಗಿದಳು ಪರವಶದಿ.

೫೮

"ಮಲ್ಲಿಗೆ ಮಾಲೆಗೆ ಧೂಪವೆ? ವಿನಯದ
ಬವಣೆ ನಿನಗದೇಕೆ?
ಸನ್ನತಾಂಗಿ! ನ್ಯೆನೊಂದಿಹೆ; ಬಳಲಿಸಿ
ಕಂದಿಸದಿರು, ಸಾಕು."

೫೯

ರಾಮನ ಮಾತಿಗೆ ಮಿರುಗೇರಿತು ಮೊಗ
ನಿಮಿಷನಿಮಿಷಕವಳ;
ನೇಸರ ಕಿರಣಕೆ ಬೆಟ್ಟದಾವರೆಗೆ
ಬಣ್ಣವೇರುವಂತೆ.

೬೦

ಮೊಗದಿ-ಮೊಗಕೆ ಮನದೊರತೆಯು ಚೆಲ್ಲುತ
ಮುಗುದರಿರಲು, ಕೆಳದಿ
ನುಡಿದಳು, "ಮಹಿಮನೆ! ಕರುಣಿಸು ತವಪದ-
ಪರಿಚಯಪುಣ್ಯವನು."

೬೧

ವಿಜಯನಗರದರಸಾಳ್ಗಳ ಬಲ್ಲಹ-
ನೆನುತಾ ಯುವನಿಯರು
ತಿಳಿದು, ಬೆಚ್ಚಿ ಬೆವರುತ ಮೊಗಮೊಗ ನೋ-
ಡುತ ಸಂಭ್ರಮಿಸಿದರು.

೬೨

ಬೆರಗನು ಬಿಡಿ! ಕುಲಭೇದವು ಕರುಣೆಯ
ಕಡಿಯದು ಕನ್ನಡದ
ಕಲಿಗಳ ನಾಡೊಳು; ಹೆಂಗಳ ಮಾನದ
ಸುರಭಿಗಿದೇ ಹೊಲವು.

೬೩

ಒಲುಮೆಯೆ ನಾರಿಯ ಬಲುಮೆಯಿಲ್ಲಿ, ತೋ-
ಳಿನ ಬಲವವಳೊಲವ
ಮುರಿಯದಿಲ್ಲಿ; ನಲ್ಮೆಯ ತೀರ್ಥಾಂಬುವ-
ನುಗುಳದು ಜನವಿಲ್ಲಿ."

೬೪

ರಾಮನ ಮಾತಿಗೆ ಹೆಣ್ಮನ ತೂಗಿತು
ತಲೆಯುನೆನಲು, ಕನ್ನೆ
ಬಾಗಿಸಿ ಕೊರಳನು, ಕೋರೆನೋಟದಲಿ
ಕೀರಿದಳವನೆದೆಯು.

೬೫

ರತಿ ಬಾಯ್ದೆರೆಯಿತು—"ಧವಲ ದೇವಿ! ನರ-
ಲೋಕದ ನಾರಿಯರು
ನೆನಸದುನ್ನತೋನ್ನತ ಮನ ನಿನ್ನೀ
ಕೈಗುದುರಿದುದಿಂದು."

೬೬

ಬಡವೆಯು ಕರಗಿದೆದೆಗೆ ಸೌಭಾಗ್ಯದ
ಝುರಿ ಸುರಿಯುತ್ತಿರಲು
ನೆರೆತುಂಬಿದ ಕಣ್ಣೊಳು, ದೊರೆಯಾಸೆಗೆ
ಅಭಿಷೇಚನವಾಯ್ತು.

೬೭

"ಹರಣವಿತ್ತು ಮೈಗೊಡೆಯನಾದನೆದೆ-
ಯೆರಕವಿತ್ತು ಬಗೆಯ
ಪಡೆದನಿನ್ನು ನೀ ಪರವತಿ"ಯೆಂದುದು
ಮಿಹಿರೆಗಂತರಂಗ.

೬೮

ಹೋಗದ ಕಡಲಲಿ ಹಾಯಿಯನೆತ್ತಿರೆ
ಹೊಸ ನೌಕೆಗಳೆರಡು,
ಹೇಳಿದಳಾಸಖಿ ಕುಲದ ಕಟ್ಟಳೆಯ
ಬೀಳುಗುಂಡನಿಳಿಸಿ.

೬೯

"ಪರಮೋದಾರ ವಿಶಾಲಹೃದಯ! ಭೀ-
ರುತೆಯ ಮನ್ನಿಸೆನ್ನ.
ಮುರಿಯೆ ಕಟ್ಟಳೆಯ ಮರೆಯಾಗದೆ ಸುಖ,
ಬಯಲಾಗದೆ ಮಾನ?

೨೦

ಮತವನ್ಯವು, ಕುಲವನ್ಯವು, ವಿಭವ-
ಸ್ಥಿತಿಯನ್ಯವು; ನಮ್ಮ
ಸುತೆ ನಿಮ್ಮರಮನೆಹೊಸ್ತಿಲ ಮೆಟ್ಟಲು
ದೊರೆಯಾಗುವಳೆಂತೋ!

೨೧

ಮನೆಯೊಲವನು ಜನದೊಲವನು ಸಂಪದ-
ದೊಲವ ಗೆಲವಿನೊಲವ,
ಮನದೊಲವಿನ ಸುಳಿಗುಂಡಿಗಿಡುಕೆ ಮಗು
ಳವನು ಪಡೆಯಲಹುದೆ?

೨೨

ಹರೆಯದ ಹೆಣ್ಣಿನ ರೂಪು ಹೊಳೆಯ ನೆರೆ,
ಗಳಿಗೆಯದರ ಬಾಳು;
ಹರೆಯವಿಳಿಯೆ, ಮೈ ಜರಿಯೆ, ಮೂಳೆ ಮೇ-
ಲುಳಿಯೆ, ಬಳಿಕ ಹಾಳು.

೨೩

ಬಾಳದ ಚೆಲುವಿಗೆ ಬಾಳೊಪ್ಪಿಸುವುದು
ಸೋಲ; ಸಾಲದುದಕೆ
ಈಕೆ ಪಠಾನಿ, ಮನಸ್ವಿತೆಯೆಮ್ಮ ಕು-
ಲೀನತೆಗೊಡನಾಡಿ.

೨೪

ಒಮ್ಮೆ ಕಪ್ಪದಿನ್ನೊಮ್ಮೆ ಬಿಳುಪು ಮಗು–
ಳೊಮ್ಮೆ ಕೆಂಪು; ಮತ್ತೆ
ಒಮ್ಮೆ ಸೋರುವುದು, ಸಾರ್ವುದೊಮ್ಮೆ; ಪುರು–
ಷರ ಮನ ಮುಗಿಲಂತೆ.

೭೫

ಮುಗಿಲು ಜನಪದಕ್ಕೊಂದು, ಮನದ ಬಗೆ
ಜನತೆಗೊಂದು; ನಿಮ್ಮ
ಮನಸು-ಮುನಿಸುಗಳ ಮೋಡಿಯನರಿಯಲಿ-
ಕಾರಳೆಮ್ಮ ಮಗಳು.

೭೬

ಕೈಪಿಡಿದವಳೆದೆ ಕಾಂತನ ಭಾವಕೆ
ಕೈಪಿಡಿಯಾಗದಿರೆ,
ಮಾಸಿರೆ ಹಗಲು ಮನೆಗೆ ಬಂದೋಪನ
ಬೇಸರಳಿವುದೆಂತು?

೭೭

ಸುಗ್ಗಿ ಬೆಳೆದು ಬೇಸಗೆಯಾದಂತಿರೆ
ನಲ್ಮೆ ಬಲ್ಮೆಯಾಗೆ,
ಬಗ್ಗಿಸಿ ಬಗ್ಗಿಸಿ ಮನಸದು ಮುರಿಯದೆ
ಬೇಸರೊಣಗಿಸಿರಲು?

೭೮

ಸಮಧರ್ಮರ ಸಮಕುಲಜರ ಸಮವಿಭ-
ವರ ದಾಂಪತ್ಯವನೇ
ಸಮನಿಸುವಾ ಕಟ್ಟಳೆ ಸುವಿವೇಕದ
ಬೆಳೆ, ನಿನಗರಿಯದುದೆ?"

೭೯

ನಲ್ಲರ ಕುದಿವೆದೆಯುಲಿ ಸಖಿ ಬರೆದಾ
ಸೊಲ್ಲು ಹೊರೆಯಲಿಲ್ಲ;
ಚಿನ್ನದ ಸಂಕಲೆ ಕೊರಳ ತೊಡರೆ, ಬಿಡಿ-
ಸಲು ಕೈ ಬರಲಿಲ್ಲ!

೮೦

ಬಯಕೆಗೆ ಕರಗುತ ಬೆರೆಯಲುಗುವ ಮನ-
ಸುಗಳ ನಿಲಿಸಲಹುದೆ?
ಅಳಿವೆಬಾಗಿಲಿಗೆ ಕದವನಿಡುವ ಕಡು-
ಗಲಿತನಕದು ಕಿರಿದೆ?

೮೧

'ಮುಗಿಲಿದೆ, ಮಂಜಿದೆ, ಮುಚ್ಚು ಮುಚ್ಚೆ'ನಲು
ಬಿರಿಯದೆ ಮುಗುಳುವುದೆ
ನಸುಕು ಹರೆಯೆ ಕಂದೆರೆವ ಹೂವು? ಹರೆ-
ಯದಿ ತಡೆಯುವರಾರೊ!

೮೨

ಕೆಳದಿಯ ಬೋಧದ ಮಂಜು ಮುಸುಕೆ ಕ-
ಣ್ಣೆಸಳನೊಂದ ಮಿಹಿರೆ
ದೊರೆಯು ಕಡೆಗೆ ಬಿಡಿಸಿದಳುದುರಲು ಕರು-
ಣವೆ ಹನಿಹನಿಯಾಗಿ.

೮೩

ನಗೆಯಲಿ ನಲ್ಲೆಯು ಮೊಗವ ಬೆಳಗಿ ನುಡಿ-
ದನು ಕೆಳದಿಗೆ ರಾಮು:—
"ಯುವನಿ! ನಿನ್ನ ನುಡಿನಿರಿಗೆ ಲೋಕವನೆ
ಮರುಳುಗೊಳಿಸೆ ಸಾಕು;

೮೪

ವಾಣಿಯು ಜಿಡೆಹೆಣೆಯುವ ಸೈರಂಧ್ರಿತ-
ನಕೆ ನೀ ತಕ್ಕವಳು;
ಆದರೆದೆಯು ಹೂದೋಟದ ಹೊಲಬಿನ
ಹಾದಿಯರಿಯದವಳು.

೮೫

ಜಗದೊಡೆಯನು ಸೃಜಿಸಿದ ವಸ್ತುಗಳಲಿ
ಹೃದಯಕೆ ದೊರೆಯಿಲ್ಲ;
ಅದರೊಳಗುದಿಸಿದ ನೇಹಕೆ ಮಿಕ್ಕಿದ
ಭಾಗ್ಯವೆ ಬೇರಿಲ್ಲ.

೮೬

ನೆಲಕೆ ನೀರು, ಮಾನಸಕೆ ನೇಹ, ಪಾ-
ವನ ಸಾಮಗ್ರಿಗಳು;
ಕೆಸರ, ಕಿಸುರ, ತೊಳೆತೊಳೆಯುತ ತಿಳಿತಿಳಿ-
ಯಾಗುತ ಹರಿಯುವವು.

೮೭

ರತ್ನ ಪರ್ವತದ ಗಾತ್ರವಿಹುದೆ? ಮ-
ಲ್ಲಿಗೆ ಮರುದಿನಕಿಹುದೆ?
ಉತ್ತಮವೆಲ್ಲ ಕಿರಿದು; ಯೌವನವಂ-
ತಿರೆ ದೂಷಿಸಬಹುದೆ?

೮೮

ಹುಣ್ಣಿಮೆ ತಿಂಗಳಿಗೊಂದನು ಕಳಿದರೆ
ಚಂದ್ರನ ಬರವಿಂಗೆ
ಕಣ್ಣೆಳಸದೆ ರಾತ್ರಿಗೆ? ಮೈ ಕುಂದಲು
ಚೆಲುವಿಕೆ ಕಿರಿದಹುದೆ?

೮೯

ಕನ್ನಡರಾಯನೆರಕವೆನಲೆರಕದ
ಕನ್ನಡಿ, ಗುಣವಂತೆ!
ಕನ್ನೆಯ ಕೈಯಲಿ ಪಳಗಿದಂತೆ ಮಿರು-
ಗೇರದಿರದು, ಕಾಂತೆ!

೯೦

ಚೆಲುವಿಗೆ ಹಿಗ್ಗದ ಒಲವಿಗೆ ಬಗ್ಗದ
ಕುರುಡುಕೊರಡಿನೆದೆಯು
ಶತಶುಂಠತೆ ಧರ್ಮದ ತಿರುಳೆನ್ನುವ
ಮರುಳನಲ್ಲ ರಾಮು.

೯೧

ಮನಸು ಮೆಚ್ಚಿ ಮಾಡುವುದೆ ಧರ್ಮ, ಧಾ-
ರ್ಮಿಕನೆ ಧೈರ್ಯಶಾಲಿ;
ಜನಕೆ ಬೆಚ್ಚಿ ಮನಮುಚ್ಚಲು, ಬೇಲಿಯು
ಹೊಲದಿ ಮೇವ ಗೂಳಿ!

೯೨

ಧರ್ಮವೆಲ್ಲ ಮತಕೊಂದೆ, ದೇವರವ-
ನೊಂದೆ, ಹೆಸರು ಬೇರೆ;
ಮರ್ಮವೆಲ್ಲಕಸುವೊಂದೆ; ಪದಾರ್ಥವ-
ದೊಂದೆ ಭಾಷೆ ಬೇರೆ.

೯೩

ಕೋಮಲಾಂಗವಿದರೊಳು ಸುಳಿಸುಳಿವಾ
ಕೋಮಲತರಮನವ
ನೋಯಿಸುವಧಮನದಾವನೊ ನೆಮ್ಮದ
ನಾಮಭೇದಕಾಗಿ?

೯೪

ವಿಭವವೀ ಭುಜಕೆ ತೊತ್ತಾಗಿರೆ, ಬಿಗಿ-
ವಿಡಿವ ಕೈಗೆ ಬೇರೆ
ವಿಭವವೇಕೆ? ಅಂದಳವೇರಿರೆ ಹಾ-
ವುಗೆಯ ತೊಡುಗೆಯೇಕೆ?

೯೫

ಉದುರುದುರುತಲಿರೆ ಸುರಭೂಜದ ಸುಮ
ಸೆರಗನೊಡ್ಡಿ ಹಿಡಿದು
ಮುಡಿಯನೇರಿಸೌ! ಮಾಂಗಲ್ಯವ ಪಾ-
ಳ್ಗೆಡೆಯಿಸದಿರು ಚದುರೆ!"

೯೬

ಕುಳಿತ ಮಿಹಿರೆಯುಂಗುಟದಿ ನೆಲದೊಳುಗು-
ರಿಸಲು ಸಮ್ಮತಿಯನು,
ಕೆಳದಿ ಮೌನಮುದ್ರೆಯನೊತ್ತಿರೆ, ದೊರೆ-
ಗಡವಾಯಿತು ನಲ್ಮೆ.

ಹಿನ್ನುಡಿ

ಹುಲಿಯ ಬೇಟೆಯೊಳಗೆ ಮೊಳೆದು, ಹುಲಿಯ ತೆರದೊಳಡಗಿ ಬೆಳೆದು,
ಬಳಿಕ ವೈರವಡೆದು, ಕನ್ನಡಿಗರ ಭಾಗ್ಯಸುರಭಿಯ
ಹಿಡಿಯಿತಂತಿದೊಂದು ಹಾಳುಬೇಟವಿಂತು; ನಿನಗದೇಕೆ
ಘಟಿಸಿತಯ್ಯೊ ವೀರನರಪತಿಗಳ ಮುಕುಟರತ್ನವೆ!

ನೆಲಕೆ ಬೀಳ್ವ ಮೊದಲೆ ತಂದೆಯುಳಿದ ಬಡವು ಹಸುಳೆ ಬೆಳೆದು,
ನೆನೆದು ಮರುಗಿ ಹೇಳಿ-ಕೇಳಿ ಬಂದ ತೆರದಿ ಬಗೆಯಲಿ
ಬಲಿದ ಪಿತನ ರೂಪನಪ್ಪಿ ಕರಗುವಂತೆ, ನಿನ್ನ ನಿಜವ-
ನರಿಯುದಿನಿತು ಬರೆದೆ; ನಮ್ಮ ಕೊನೆಯ ದೊರೆಯೆ! ಮನ್ನಿಸು.

೧೯೩೪.

ಕೆನರಾ ಛಾಪಖಾನೆ, ಮಂಗಳೂರು.